ಎ ಮ್ಯಾಂಬಳ

ನ್ಯೂ ಡಿಡ್ಡು 1995

ಶ್ರೀ ಕೃಷ್ಣ ಸಂಧಾನ

ಬಾಲಸಾಹಿತ್ಯ ಮಂಡಳ
ಅಮಿಟೆಡ್
ಕೊಡಿಯಾಲಬೈಲು, ಮಂಗಳೂರು

ಲೇಖಕ
ಉಡುಪಿಯ ಬೋರ್ಡ್ ಹಾಯರ್
ಎಲಿಮೆಂಟರಿ ಶಾಲೆಯ ಅಧ್ಯಾಪಕ
ಕೆ. ಬಿ. ರಾಮಕೃಷ್ಣ

ಹರಾಪಹೋಗಾನಿ

ಕ್ರಯ 0-4-0
ನಾಲ್ಕಾಣೆ

of mauntiion crakced and
hick black cloud rose out of the
han a rain of liquid rock an d hot
ash fell on the city and des
e top of mountain crackred and a
hick black clout roze out of the
ham a rain of liquid rock a
hot ash fell on
urrounded cit citysand

a cat



ಮುನ್ನುಡಿ

ಮಹಾಭಾರತದಲ್ಲಿ ಶ್ರೀ ಕೃಷ್ಣನ ರಾಯಭಾರವು ಎಲ್ಲರಿಗೂ ತಿಳಿ ರುವ ಅಂಶವಷ್ಟೆ! ಆ ಕಥೆಯನ್ನೆ ನಾಲ್ಕು ವರುಷಗಳ ಹಿಂದೆ ಇಲ್ಲಿನ ಣಪತಿ ಸೆಕೆಂಡರಿ ಶಾಲೆಯ ಮಕ್ಕಳಿಂದ ವಿಜಯದಶಮಿಯ ದಿನ ಡಿ ತೋರಿಸುವುದಕ್ಕಾಗಿ ನಾಟಕರೂಪವಾಗಿ ಬರೆದುದಾಗಿದೆ. ಚಿಕ್ಕ ಕ್ಕಳಿಗೆ ಇದರಿಂದ ಪ್ರಯೋಜನವುಂಟಾಗಬಹುದೆಂಬ ಅಭಿಪ್ರಾಯ ಗ್ಗ ಸಲವರು ಮಿತ್ರರು ಇದನ್ನು ಅಚ್ಚುಹಾಕಿಸಿ ಪ್ರಕಟಿಸಬೇಕೆಂದು ಪ್ರೋತ್ಸಾಹಿಸಿದುದರಿಂದ, ಈ ಕಾರ್ಯಕ್ಕೆ ತೊಡಗಿರುವೆನಲ್ಲದೆ ಮತ್ತೆ ೇರೆಯಲ್ಲ. ಇದರಲ್ಲಿ ದೋಷಗಳು ಹಲವಿರಬಹುದು. ಆದರೂ, ರಸಿಕ ಾದವರು ಇದರ ವಿಷಯದಲ್ಲಿ ಹಂಸಕ್ಷೀರ ನ್ಯಾಯದಂತೆ ವರ್ತಿಸ ೇಕೆಂಬುದೆ ನನ್ನ ಪ್ರಾರ್ಥನೆ.

ಮಂಗಳೂರು,
ತಾ. 20—2—1918.

ಕೆ. ಬಿ. ರಾಮಕೃಷ್ಣ.

ಶ್ರೀ ಕೃಷ್ಣಸಂಧಾನ.

ನಾಟಕದ ಪಾತ್ರಗಳು.

ಕೃಷ್ಣ, ಬಲರಾಮ—ಯಾದವ ನಾಯಕರು.
ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇ

ಸುಯೋಧನ—ಕುರುರಾಜ.
ದುಶ್ಯಾಸನ—ಯುವರಾಜ.
ಧೃತರಾಷ್ಟ್ರ—ಕೌರವರ ತಂದೆ.
ಭೀಷ್ಮಾಚಾರ್ಯ—ಕೌರವರ ಅಜ್ಜ.
ದ್ರೋಣಾಚಾರ್ಯ, ಕೃಪಾಚಾರ್ಯ—ಕೌರವ ಪಾಂಡ

ಅಶ್ವತ್ಥಾಮ—ದ್ರೋಣಾಚಾರ್ಯರ ಪುತ್ರ.
ಕರ್ಣ—ಕೌರವನ ಪರಮ ಮಿತ್ರ.
ಶಕುನಿ—ಕೌರವರ ಸೋದರಮಾವ.
ವಿದುರ, ಸಂಜಯ—ಮಂತ್ರಿಗಳು.
ಪಾಂಚಾಲಿ—ಪಾಂಡವರ ಪತ್ನಿ.
ಕನಕಾಂಗಿ—ವಿದುರನ ಸೋದರಸೊಸೆ.
ಕಂಚುಕಿ.

ಮೊದಲನೆಯ ಅಂಕ.

ಮೊದಲನೆಯ ಪ್ರವೇಶ.

[ಸ್ಥಳ:—ವಿರಾಟನಗರ. ಅಂತಃಪುರದಲ್ಲಿ ಪಾಂಚಾಲಿಯು ಮಂಚದ ಮೇಲೆ ಕುಳಿತಿರುವಳು.]

ಪಾಂಚಾಲಿ—(ಸ್ವಗತ) ಈ ಲೋಕದಲ್ಲಿ ಸಕಲ ಸೌಭಾಗ್ಯಗಳಿ
ರೂ ಏನು ತಾನೆ ಪ್ರಯೋಜನ? ಅನುಭವಿಸಬೇಕಾದರೆ ಪುಣ್ಯವಿರ
ೇಕು! ವೀರಾಧಿವೀರರಾದ ಪತಿಗಳು! ಅದರಲ್ಲಿಯೂ ಐವರಿರುವರು!
ೂಮಂಡಲದೊಳಗೆಲ್ಲ ಪ್ರಖ್ಯಾತನಾದ ಅರಸನ ಮಕ್ಕಳು! ಆದರೆ, ಸ್ವಸ್ಥ
ಾಗಿ ಕುಡಿಯುವುದಕ್ಕೆ ಒಂದು ಸೆರೆ ಗಂಜಿಗೆ ಕೂಡ ಗತಿಯಿಲ್ಲವಲ್ಲ!
ಗ್ದೇಶ ಸಂಚಾರಮಾಡಿ, ಕಾಡುಗುಡ್ಡೆಗಳೆಲ್ಲ ಸುತ್ತಿಸುತ್ತಿ, ಹೆರವರ
ನೆಯಲ್ಲಿ ಸೇವಾವೃತ್ತಿಯನ್ನು ಮಾಡಿಕೊಂಡು, ದರಿದ್ರರಂತೆ ಕಾಲಹರಣ
ಾಡಬೇಕಾಯಿತು! ಇದೆಲ್ಲ ನನ್ನ ದೌರ್ಭಾಗ್ಯವೆ ಸರಿ. ಇಲ್ಲದೆ ಹೋದರೆ
ನಗೇನು ಕಡಿಮೆ? ತಂದೆಯಾದರೂ ಅರಿಕೇಸರಿ ದ್ರುಪದರಾಜ! ಪಾಂಡು
ಕ್ರವರ್ತಿಯ ಮಕ್ಕಳೆ ಗಂಡಂದಿರು! ಇನ್ನು ಅವರೇನು ಕಡಿಮೆಯೇ?
ಬ್ಬನಾದರೊ ಬರಿಯ ಮಾತಿನಿಂದಲೆ ಕಲ್ಲನ್ನು ಕೂಡ ಕರಗಿಸಿಬಿಟ್ಟಾನು!
ನ್ನೊಬ್ಬನು ಸಾವಿರ ಆನೆಗಳ ಸತ್ವವುಳ್ಳವನು! ಮೂರನೆಯವನು 'ಮೂರು
ೋಕದ ಗಂಡು' ಎಂಬ ಹೆಸರು ಪಡೆದಿದ್ದಾನೆ! ದೇವೇಂದ್ರನಲ್ಲಿ ಕೂಡ
ರ್ಾಸನ ಪಡೆದವನು! ಇನ್ನುಳಿದಿಬ್ಬರ ಸಾಮರ್ಥ್ಯವು ಅಷ್ಟಿಷ್ಟಲ್ಲ.
ೂರು ಲೋಕದಲ್ಲಿಯೂ ಅವರನ್ನು ಜಯಿಸತಕ್ಕ ಸಮರ್ಥರಾರಿರುವರು?
ವಾರ್ಪರವೆಲ್ಲ ಚೆನ್ನಾಗಿ ಬಲ್ಲವರು! ಇಂತಹ ಸಮರ್ಥರಿಗೆ ಕೂಡ
ಷ್ಟರ ಮಟ್ಟಿನ ದುರವಸ್ಥೆಯು ಬರಬೇಕಾದರೆ—ಇದು ಕೇವಲ ಮಂದ
ಗ್ಯೆಯಾದ—ನನ್ನ ಕೈಹಿಡಿದುದರಿಂದಲ್ಲವೆ?—ಶ್ರೀ ಕೃಷ್ಣನ ಕಾರುಣ್ಯ
ಂದಿಲ್ಲದಿರುತ್ತಿದ್ದರೆ ನಾವೇನಾಗಿ ಹೋಗುತ್ತಿದ್ದೆವೊ, ಕಾಣೆ (ತೆರೆಯ ಕಡೆ

ಅರನ್ನೋ ನೋಡುವಂತೆ ನಟಿಸಿ)-ಓಹೋ! ಏನೋ ವಿಶೇಷವಿರಬೇಕು ಪುತ್ರನು ಅವಸರದಿಂದ ಬರುತ್ತಿರುವನು. ಬಹುಶಃ ಅರ್ಧರಾ ವುದಕ್ಕೆ ಹೋಗಿದ್ದ ಶತಾನಂದರು ಬಂದಿರಬೇಕು.—(ಎದ್ದು ಭೀಮನು ಬಂದು ಮಂಚದ ಮೇಲೆ ಕುಳಿತುಕೊಳ್ಳುವನು.)

ಭೀಮ—ಪಾಂಚಾಲೀ, ಎಲ್ಲವೂ ಸರಿಯಾಯಿತು.

ಪಾ—ಏನು? ಶತಾನಂದರು ಬಂದರೇ?

ಭೀಮ—ಅಹುದು. ಕೌರವನು ಅರ್ಧರಾಜ್ಯ ಕೊ ವಂತೆ.

ಪಾ—ಹಾಗಾದರೆ ಸರಿ. ಇನ್ನು ಸಪ್ತಾಕ್ಷರೀಮಂತ್ರ ಕೊಂಡರಾಯಿತು.

ಭೀಮ—ಹಾಗೆಂದರೇನು?

ಪಾ—"ಭ—ವ—ತಿ—ಭಿ—ಕ್ಷಾಂ—ದೇ—ಹಿ!"

ಭೀಮ—ಛಿ! ಬಿಡು! ಇದೇನು ಮಾತು? ಅರ್ಧರಾಜ್ಯ ಯಾಗಿ ಇಡೀ ರಾಜ್ಯವೆ ಲಭಿಸುವುದು!

ಪಾ—ವನರಾಜ್ಯವೆ ಸರಿ!

ಭೀಮ—ನಾವೇನು ಗಂಡುಸರಲ್ಲವೆಂದೆಣಿಸಿರುವೆಯಾ?

ಪಾ—ಅಂದೆ ಗೊತ್ತಾಗಿದೆಯಲ್ಲವೆ?

ಭೀಮ—ಎಂದು?

ಪಾ—ದುಶ್ಶ್ಯಾಸನನು ಮಾನಭಂಗಮಾಡಿದಾಗ!

ಭೀಮ—ಛಿ! ಛಿ! ಪಾಂಚಾಲೀ, ಇಂತಹ ಮಾತು ಆಡಕೂಡದು. ಅಣ್ಣಯ್ಯನಿಗೋಸ್ಕರವಲ್ಲವೆ ಅಂದು ನಾನು ನಿದ್ದುದು?—ಕೀಚಕನ ಅವಸ್ಥೆಯನ್ನಾದರೂ ಕಾಣೆಯಾ?

ಪಾ—ಅದು ಹಾಗಿರಲಿ; ಈಗ ಯುದ್ಧಮಾಡುವಿರೇನು?

ೀಮ— ಮಾಡದೆ ಉಂಟೆ?

—ಕೌರವನೇನು ಹೇಳಿದನಂತೆ?

ೀಮ— ಯುದ್ಧಮುಖೇನ ನ್ಯಾಯ ತೀರಬೇಕಲ್ಲದೆ ಸಂಧಿಯಾಗ

—"ವಿನಾಶಕಾಲೇ ವಿಪರೀತ ಬುದ್ಧಿಃ"!

ೀಮ— ಅಲ್ಲದೆ ಮತ್ತೇನು?— ಈಗ ನನ್ನ ಪ್ರತಿಜ್ಞೆ ಪೂರೈಸು
ಅನುಕೂಲವಾದಂತಾಯಿತು.

— ಆದರೆ ಯುದ್ಧನಡೆಯುವುದೆಂದು ನಾನು ನಂಬಲಾರೆ.
ದರೂ ಬಹಳ ದೊಡ್ಡ ಪೌರಾಣಿಕರೊಬ್ಬರಿದ್ದಾರೆ! ಸಂಧಿಯು
ಪುನಃ ಬರುವುದಿಲ್ಲವೆಂದು ಹೇಗೆ ಗೊತ್ತು?

ೀಮ— ಇನ್ನು ಬರಲಾರದು. ಕೌರವನು ಯಾದವರ ಸಹಾಯ
ೂಳ್ಳುವುದಕ್ಕೋಸ್ಕರ ದ್ವಾರಾವತಿಗೆ ಆಗಲೆ ಹೋಗಿರುವನಂತೆ.

— ಒಂದು ವೇಳೆ ಸಂಧಿಯ ಮಾತು ಬಂದುಬಿಟ್ಟರೆ—

ೀಮ— ಬಂದರೆ ಬರಲಿ. ನಾನು ಮಾತ್ರ ಯುದ್ಧಮಾಡುವುದೆ
ಆ ನೀಚನು ಮಾಡಿದ ದ್ರೋಹಗಳೆಲ್ಲ ನನಗಷ್ಟು ಬೇಗನೆ ಮರೆತು
ವೆಂದು ಭಾವಿಸಿರುವೆಯಾ? ಇದು ವರೆಗೂ ಅಣ್ಣಯ್ಯನ ಮಾ
ು ವೇದವಾಕ್ಯವೆಂದು ಮನ್ನಿಸುತಿದ್ದೆ. ಇದೊಂದು ವಿಷಯದಲ್ಲಿ
ಇನ್ನು ಕೇಳಲಾರೆ!

— ಹಾಗಾದರೆ ನನಗೆ ಮುಡಿ ಹಾಕಿಕೊಳ್ಳುವ ಯೋಗವು
ಾಗುವುದು!

ೀಮ— ಅದಕ್ಕೇನು ಸಂದೇಹ?

— ಈಗ ಯುದ್ಧಮಾಡುವುದಾದರೆ ಸಹಾಯಕರಾರಿದ್ದಾರೆ?

ೀಮ— ಸಹಾಯಕರೆ? ಏಕೆ? ನಾನೊಬ್ಬ ಸಾಲದೆ? ಅರ್ಜು
ದ್ವಾರಾವತಿಗೆ ಹೋಗಿದ್ದಾನೆ.

ಪಾ—ಹಾಗಾದರೆ ನಮ್ಮ ಕಾರ್ಯವು ಕೈಗೂಡಿದಂತೆ
ಕೃಷ್ಣನೊಬ್ಬನಿದ್ದರೆ ಸಾಕು!

ಭೀಮ—ಇರಲಿ. ಈಗ ಆಸ್ಥಾನಕ್ಕೆ ಹೋಗಬೇಕು.
ನಿನಗೆ ತಿಳಿಸಿಬಿಡೋಣವೆಂದು ಬಂದೆ.

(ಭೀಮನು ಹೋಗುತ್ತಿರುವನು.)

ಪಾ—ನಾಸಿಷ್ಟರ ಮಟ್ಟಿಗೆ ಅನುಗ್ರಹಕ್ಕೆ ಅರ್ಹಳೇ?

ಎರಡನೆಯ ಪ್ರವೇಶ.

[ಸ್ಥಳ—ದ್ವಾರಾವತಿ. ನಿದ್ರಿಸುತ್ತಿರುವ ಕೃಷ್ಣ]

ಸುಯೋಧನ—(ಪ್ರವೇಶಿಸಿ, ಕೃಷ್ಣನನ್ನು ನೋಡಿ ತನ್ನಲ್ಲಿಯೆ)—
ಇದೊ! ಲಕ್ಷ್ಮೀಪತಿಗಿಂತಲೂ ಭಿಕ್ಷಪತಿಯೆ ಮೇಲು! ಈ ಕೃಷ್ಣನು
ನಿದ್ರಿಸುತಿದ್ದಾನೆ! ನನಗಂತೂ ಮೊನ್ನೆಯಿಂದ ಕಣ್ಣಾಲಿಸ್ಯ ಕೂಡ
ದಿಲ್ಲ. ರಾತ್ರಿಯೆಲ್ಲ ಯುದ್ಧದ ಯೋಚನೆಯೆ! ಈತನಿಗಾದರೊ
ದೊಂದು ಯೋಚನೆಯೂ ಇಲ್ಲ. ತಿನ್ನುವುದಕ್ಕೆ ಬೇಕಾದಷ್ಟು
ರಾಜ್ಯಕಾರ್ಯವನ್ನೆಲ್ಲ ಬಲರಾಮನು ನಿರ್ವಹಿಸುತ್ತಾನೆ! ಈತನು ಸ
ಭೋಗದಲ್ಲಿಯೆ ಕಾಲಹರಣ ಮಾಡುತ್ತಿರುವನು. ಜನರೆಲ್ಲರೂ
ಸಾಕ್ಷಾತ್ ಭಗವಂತನೆಂದು ಭ್ರಮಿಸುತ್ತಾರೆ!—ಆದರಲ್ಲೇನೂ ಸ
ವಿಲ್ಲ. ಅಮಾನುಷವಾದ ಕಾರ್ಯವನ್ನು ಕೂಡ ಮಾಡಬಲ್ಲನು.
ರಾಮನು ಕೂಡ ಈತನ ಪರಾಮರ್ಶವಿಲ್ಲದೆ ಆವ ಕಾರ್ಯದ
ಪ್ರವರ್ತಿಸುವುದಿಲ್ಲ! ಇಲ್ಲವಾದರೆ, ನಾನೇಕೆ ಈತನ ಬಳಿಗೆ ಬರ
ಹೇಗಾದರೂ ಮಾಡಿ, ಈತನನ್ನು ವಶಮಾಡಿಕೊಂಡು ಬಿಟ್ಟರೆ,
ರಾಮನು ಕೂಡ ವಶನಾದಂತೆಯೆ ಸರಿ. (ಹತ್ತಿರ ಹೋಗಿ ಕೃಷ್ಣನ ಮು
ನೋಡಿ, ಹಿಂದೆ ಬಂದು)—ಈಗ ನಾನು ಹೇಗೆ ವರ್ತಿಸಬೇಕೊ ಗೊ

ೃ. ಈತನನ್ನು ಎಚ್ಚರಗೊಳಿಸಲೆ? ಒಂದು ವೇಳೆ ಸಿಟ್ಟುಗೊಂಡರೆ, ಶ್ರಮವೆಲ್ಲ ನಿರರ್ಥಕವಾಗುವುದು! ಸರಿ, ತಾನಾಗಿಯೆ ಏಳಲಿ! ು ಕಡೆಗೆ ನೋಡಿ)—ಓಹೊ. ಅರ್ಜುನನು ಕೂಡ ಬಂದುಬಿಟ್ಟನು! ು ಆತನನ್ನೆ ಮೊದಲು ಕಂಡು, ಆತನಿಗೆ ಸಹಾಯಮಾಡುವುದಾಗಿ ೊಂಡು ಬಿಟ್ಟರೆ, ನನ್ನ ಕಾರ್ಯ ಕೆಟ್ಟಂತಾಯಿತು. ಎಚ್ಚರ ಡೊಡನೆಯೆ ನನ್ನನ್ನೆ ನೋಡಬೇಕು. ಆದುದರಿಂದ—(ಕೃಷ್ಣನ ಕಾಲ ಹೋಗುತ್ತ)—ನಾನಿಲ್ಲಿ ಕುಳಿತುಕೊಂಡರೆ ಸರಿಯಾಗುತ್ತೆ. (ಕುಳಿತು ವನು. ತಟ್ಟನೆ ಎದ್ದು ದೂರ ಸರಿದು)—ನಾನು ರಾಜಾಧಿರಾಜ! ಈತನು ಲ ಗೋವಳನು! ಅದಾಗಲಾರದು. ಕಾಲುದೆಸೆಯಲ್ಲಿ ಕುಳಿತು ಡರೆ—ನನಗೆ ತುಂಬ ಅವಮಾನ! ತಲೆದೆಸೆಯಲ್ಲಿ ಕುಳಿತುಕೊಂಡು ೆನು. ಕಣ್ಣು ತೆರೆದೊಡನೆಯೆ ನನ್ನ ಮುಖ ಕಾಣಿಸಬೇಕು! ತುಕೊಳ್ಳುವನು.)

ಅರ್ಜುನ—(ಪ್ರವೇಶಿಸಿ ಕೃಷ್ಣ ಸುಯೋಧನರನ್ನು ನೋಡದೆ ತನ್ನಲ್ಲಿಯೆ)— ! ನಾನೆಷ್ಟು ಬೇಗನೆ ಬಂದರೂ ನನ್ನಿಂದ ಮುಂಚಿತವಾಗಿಯೆ ಯ್ಯನು ಬಂದಿರುತ್ತಾನಂತೆ. ಹಾದಿಯಲ್ಲಿ ನನಗೆ ಶುಭಶಕುನಗಳಾದು ಾ ನಿಜ! ಭಗವಂತನ ವ್ಯಾಪಾರವು ಹೇಗಿದೆಯೊ, ತಿಳಿಯದು. ಯ್ಯನಿಗೆ ಏನು ಉತ್ತರ ಹೇಳಿಬಿಟ್ಟನೊ? ಒಳ್ಳೆಯದು, ಈಗಲೆ ುವುದು. (ಕೃಷ್ಣ ಸುಯೋಧನರನ್ನು ನೋಡಿ ಸಂತೋಷದಿಂದ)—ಚೆನ್ನಾ ು, ಚೆನ್ನಾಯಿತು! ಭಗವಂತನು ನಿದ್ರಿಸುತ್ತಾನೆ. ಅಣ್ಣಯ್ಯನು ಭಂಗ ಮಾಡದೆ, ತಲೆದೆಸೆಯಲ್ಲಿ ಕುಳಿತಿದ್ದಾನೆ! ನನ್ನಂತಹ ಅಲ್ಪನು ಪರಮಾತ್ಮನ ಕಾಲುಬುಡದಲ್ಲಿ ನಿಲ್ಲುವುದೆ ಯುಕ್ತ! (ಕಾಲುಬುಡದಲ್ಲಿ ವನು.)

ಕೃಷ್ಣ—(ಎಚ್ಚರಗೊಂಡು ಅರ್ಜುನನನ್ನು ಕಂಡು)—ಅರ್ಜುನಾ, ಸುಖಾ ನವೆ? ಈಗ ತಾನೆ ಬಂದೆಯಾ?

ಅರ್ಜುನ—ಕೃಷ್ಣಾ, ಅಣ್ಣಯ್ಯ ಬಂದಿರುತ್ತಾನಲ್ಲ!

ಕೃಷ್ಣ—(ಸುಯೋಧನನನ್ನು ನೋಡಿ)—ಕೌರವೇಶ್ವರನೆ! ಏನು ಭಾವ , ಕ್ಷೇಮವೆ? ಬಹಳ ಅಪರೂಪ!

ಸುಯೋ—ಅಪರೂಪವೆ ಸರಿ!

ಕೃಷ್ಣ—ಬಂದು ಬಹಳ ಹೊತ್ತಾಯಿತೊ ಏನೊ?
ಬಾರದಿತ್ತೆ?

ಸುಯೋ—ನಿದ್ರಾಭಂಗ ಮಾಡುವುದಕ್ಕೆ ಮನಸ್ಸು ಬರಲಿಲ್ಲ

ಕೃಷ್ಣ—ಅದರಲ್ಲೇನು?—ಈಗ ನೀವಿಬ್ಬರೂ ಜತೆ
ಬಂದುದು ನೋಡಿ ನನಗೆ ತುಂಬ ಸಂತೋಷವಾಯಿತು.
ಪಾಂಡವರನ್ನು ಅಡವಿಗಟ್ಟಿದಾಗ, ಕೌರವನು ತುಂಬ ಕ್ರೂರನೆಂದೆ
ಈಗ ನಿಮ್ಮೊಳಗೆ ಇಂತಹ ಮಿತ್ರತ್ವವುಂಟಾದುದು ಕೇವಲ ಆಶ್ಚ
ಸರಿ! ಎಷ್ಟೆಂದರೂ ಒಡಹುಟ್ಟಿದವರಲ್ಲವೆ? ಮಾಯಾಪಾಶವು
ತಾನೆ ಹರಿದುಹೋದೀತು? ಪ್ರಸ್ತುತಃ ನೀವೇನು ನಿಮಿತ್ತ ಇಲ್ಲ
ದಯಮಾಡಿಸಿದಿರಿ? ನನ್ನಿಂದಾಗತಕ್ಕದೇನಾದರಿದೆಯೆ? ಆಜ್ಞೆಯಾಗ

ಸುಯೋ—ಕೃಷ್ಣಾ, ಏತಕ್ಕೋಸ್ಕರ ಇಷ್ಟೆಲ್ಲ ಉಪಚಾರ ಹೇ
ಒಣ್ಣಾಚಾರವೆಲ್ಲ ಹಾಗಿರಲಿ. ನಾವು ದಾಯವಾದಿಗಳು ಎಂದ
ಸೇರುವುದುಂಟೆ? ರಾಜ್ಯಕ್ಕೋಸ್ಕರ ಯುದ್ಧಮಾಡುತ್ತೇವೆ! ಜಯಾಪ
ಗಳು ನೀನೆ ಬಲ್ಲೆ. ಆದರೆ, ನಮ್ಮಿಬ್ಬರಿಗೂ ನೀನು ಸಹಾ
ನಾಗಭೇಕು!

ಕೃಷ್ಣ—(ಕಿವಿ ಮುಚ್ಚಿಕೊಂಡು)—ಶಿವಶಿವಾ! ಇದನ್ನು ನಾನು
ಲಾರೆ. ನೆಲದಾಸೆಗಾಗಿ ಹೊಡೆದಾಡಿಕೊಳ್ಳುವುದುಂಟೆ? ಈ ಭ
ಯಿಂದೇನಾದೀತು? ಇದೇನು ಸ್ಥಿರವಾಗಿರುವುದೇ? ಇಂದಿ
ನಾಳೆಗಿಲ್ಲ. ನೀವೆರಡು ಪಕ್ಷದವರೂ ಒಂದಾಗಿ ಸಂತೋಷದಿಂ
ನಾವೆಲ್ಲರೂ ಕಣ್ಣುತುಂಬ ನೋಡಿ ಆನಂದಪಟ್ಟೇವು. ನಿಮ್ಮ ಮ
ಕೇಳಿದರೆ—ಏನೊ ಭ್ರಮೆಗೊಂಡವರಂತೆ ಕಾಣಿಸುತ್ತೀರಿ. ಈಗ
ಕಾದಾಡಿಕೊಂಡರೆ ಅಪಕೀರ್ತಿ ಬರುವುದಿಲ್ಲವೆ? ಆವ ಮುಖದಲ್ಲಿ ಅ
ವನ್ನು ಕಾಣುವಿರಿ?

ಸುಯೋ—ಕೃಷ್ಣಾ, ಸಾಕು; ನಾವು ನಿನ್ನ ಹತ್ತಿರ ಧ
ಶ್ರವಣ ಮಾಡುವುದಕ್ಕೆ ಬರಲಿಲ್ಲ, ಬಲ್ಲೆಯಾ? ಕ್ಷಾತ್ರಧರ್ಮವು ನ

ಗಿ ತಿಳಿದಿರುವುದು. ನೀನೆಷ್ಟು ಹೇಳಿದರೂ ಬಂಡೆಗಲ್ಲಿನ ಮೇಲೆ ಸುರಿದಂತೆಯೇ ಸರಿ! ನಾವು ಕಾದಾಡುವುದೇನೊ ನಿಶ್ಚಯ. ಬ್ಬರಿಗೂ ನೀನು ಬೆಂಬಲನಾಗಬೇಕು! ಸಾಧ್ಯವಿದೆಯೆ, ಹೇಳು ಡೋಣ?

ಕೃಷ್ಣ—ಅರ್ಜುನಾ, ನಿನ್ನ ಅಭಿಪ್ರಾಯವೇನು?

ಅರ್ಜುನ—ಅಣ್ಣಯ್ಯನ ಅಭಿಪ್ರಾಯವೆ ನನ್ನ ಅಭಿಪ್ರಾಯ. ನೀನು ಗ್ರಹಿಸಿದರಾಗಬಹುದು!

ಕೃಷ್ಣ—ನಾನೇನು ಅನುಗ್ರಹಿಸಲಿ? ಹಿಂದೆ, ಏನೊ ಕೆಲವರು ರನ್ನು ನಾನು ಸಂಹರಿಸಿದುದು ನಿಜ. ಆದರೆ, ಅದೆಲ್ಲ ಅಣ್ಣಯ್ಯನಿಲ್ಲ ರಾಗುತ್ತಿತ್ತೆ? ಶತ್ರುಗಳೊಂದಿಗೆ ನಾನೇನು ತಾನೆ ಮಾಡಿಯೇನು? ಅದ ಯೂ ನಾನು ಏಕಾಂಗಿ. ಸೈನ್ಯ, ದ್ರವ್ಯ ಮುಂತಾದುವೆಲ್ಲ ಅಣ್ಣಯ್ಯ ರುವುದು. ಹೀಗಿರುವಾಗ ನಾನೇನು ಸಹಾಯ ಮಾಡಲಿ?

ಅರ್ಜುನ—ಅದೊಂದೂ ನನಗೆ ತಿಳಿಯದು. ನಮಗೆ ಸಹಾಯ ಗಬೇಕು.

ಕೃಷ್ಣ—ಹಾಗಾದರೆ ಕೇಳು. ನಾನೊಬ್ಬ ಒಂದು ಪಕ್ಷ; ಸಕಲ ೆ, ದ್ರವ್ಯ ಮುಂತಾದುದರೊಡನೆ ಅಣ್ಣಯ್ಯನೊಂದು ಪಕ್ಷ; ನಿನಗೆ ಮ್ಮಲ್ಲಿ ಆರಾದೀತು, ಹೇಳು ನೋಡೋಣ?—(ಸುಯೋಧನನನ್ನು ನೋಡಿ) ನಯ್ಯನಿಗಾರಾದೀತು?

ಸುಯೋ—ಚಿಕ್ಕವನು ಅರ್ಜುನನಿದ್ದಾನೆ. ಆತನೆ ಮೊದಲು ಆರಿಸಿ ಳ್ಳಲಿ! ಉಳಿದವನು ನನ್ನ ಪಕ್ಷಕ್ಕಾದರೆ ಸರಿ.

ಕೃಷ್ಣ—ಅರ್ಜುನಾ, ನಿನಗಾರಾದೀತು?

ಅರ್ಜುನ—ಕೃಷ್ಣಾ, ನಾವು ದರಿದ್ರರು. ಬಲರಾಮನು ತನ್ನ ಮುದ್ರದಂತಿರುವ ಸೈನ್ಯ ಸಮೇತ ಬಂದರೆ, ನಾವು ಅವರನ್ನು ಹೇಗೆ ಘಾರಿಸಬಲ್ಲೆವು? ಬಡವರಿಗೆ ಬಡವರೆ ಸಹಾಯ! ನೀನೆ ನಮ್ಮ ಪಕ್ಷ ಸ್ಟು ಬಿಡು!

ಸುಯೋ—(ಸಂತೋಷವನ್ನೂ ಆಸಹ್ಯತೆಯನ್ನೂ ತೋರ್ಪಡಿಸುತ್ತ
ಸರಿ, ಯೋಗ್ಯತೆಗೆ ತಕ್ಕ ಕೆಲಸ! ಚಿಂತಿಲ್ಲ. ಬಲರಾಮನೆ ನನ
ಕ್ಕಿರಲಿ; ಆದರೆ, ಕೃಷ್ಣಾ, ನೀನು ಮಾತ್ರ ಚಕ್ರ ಹಿಡಿಯಕೂಡದು!

ಕೃಷ್ಣ—ಆಗಲಿ, ಅದರಿಂದೇನಾದೀತು?

ಸುಯೋ—ಒಳ್ಳೆಯದು, ನನ್ನ ಕಾರ್ಯವಾಯಿತು. ಈಗ
ರಾಮನಲ್ಲಿಗೆ ಹೋಗಬೇಕು.

ಕೃಷ್ಣ—ಇಷ್ಟ! (ಸುಯೋಧನನು ಹೋಗುತ್ತಾನೆ)—ಅರ್ಜುನಾ
ಮಾಡಿಬಿಟ್ಟೆ? ಕತ್ತಿಯನ್ನು ಬಿಟ್ಟು ಬರಿಯ ಒರೆಯನ್ನಿಟ್ಟುಕೊಳ್ಳಬ
ಅಣ್ಣಯ್ಯನನ್ನೇಕೆ ಕೇಳಿಕೊಳ್ಳಲಿಲ್ಲ? ನನ್ನೊಬ್ಬನಿಂದೇನಾದೀತು?
ಶಸನ ಕೂಡ ಹಿಡಿಯಕೂಡದಂತೆ! ಪರಾಧೀನರಾದ ಯಾದ
ಕೌರವನ ಸಹಾಯಕ್ಕಾದರು! ನೀನು ಸ್ವಲ್ಪವಾದರೂ ಯೋಚಿಸದೆ
ಬಿಡುವುದೇ?

ಅರ್ಜುನ—ಕೃಷ್ಣಾ, ಈ ಕಪಟು ಮಾಯೆಯೆಲ್ಲ ಆರೊಡನಾ
ನಿನ್ನ ಸಂಗತಿಯು ನನಗೆ ಚೆನ್ನಾಗಿ ತಿಳಿದಿರುವುದು. ನೀನೊಬ್ಬ
ಸಾಕು!

ಕೃಷ್ಣ—ನಿನಗೇನೊ ಭ್ರಮೆ. ಧರ್ಮನೇನೆಂದಾನು?

ಅರ್ಜುನ—ಆತನಿಗೆ ತುಂಬ ಸಂತೋಷವಾದೀತು, ನಿನ್ನ ಮ
ಯನ್ನರಿಯದವನಲ್ಲ! ಮೂರು ಲೋಕಗಳೂ ನಿನ್ನ ಆಜ್ಞಾಮಾತ್ರದ
ಅಂದ ಮೇಲೆ ನಿನ್ನಂತಹ ಕಾರಣಿಕ ಪುರುಷನೆ ನಮ್ಮಲ್ಲಿರುವಾಗ ನ
ಅಪಜಯವೆಂದರೇನು?

ಕೃಷ್ಣ—ಯುದ್ಧಮಾಡುವುದಕ್ಕೆ ನನ್ನಿಂದ ಸಾಧ್ಯವಿಲ್ಲ. ಆವ ಕ
ಮಾಡಲಿ?

ಅರ್ಜುನ—ಹೇಳಲೆ? ಕೋಪಿಸಿಕೊಳ್ಳಬಾರದು.

ಕೃಷ್ಣ—ಅದರಲ್ಲಿ ಕೋಪವೇನು? ನನ್ನಿಂದಾಗುವುದು ನ
ಮಾಡಲೆಬೇಕಷ್ಟೆ?

ಅರ್ಜುನ—(ಮೊಣಕಾಲೂರಿ ಕೈಮುಗಿದು)—ಬೇರೇನು ಕೆಲಸವೂ ಡ; ನನಗೆ ಸಾರಥಿತ್ವಮಾಡಬೇಕು! ಇದುವೆ ನನ್ನ ಪ್ರಾರ್ಥನೆ!

ಕೃಷ್ಣ—(ಸಿಟ್ಟುಗೊಂಡವನಂತೆ ಎದ್ದು)—ಶಹಭಾಸ್ ಅರ್ಜುನಾ, ಭಾಸ್! ಚಂದ್ರವಂಶದವರೂ ಮಹಾ ಧರ್ಮಿಷ್ಟರೂ ಎಂದೆಣಿಸಿ, ಅನೇಕ ರಿ ನಿಮಗೆ ಸಹಾಯಮಾಡಿದೆ! ಅದೂ ಸಾಲದೆ ನಮ್ಮ ಅತ್ತೆಯ ಮಗ ದು ನಿನಗೆ ಸುಭದ್ರೆಯನ್ನು ಕೂಡ ಮದುವೆ ಮಾಡಿಸಿಕೊಟ್ಟೆ! ಒಳ್ಳೆಯ ಸ ನಿಯಮಿಸಿದೆ! "ಅಲ್ಪರ ಸಂಗ, ಅಭಿಮಾನ ಭಂಗ"! ನಿಮ್ಮಂತಹ ಲ್ಪರ ಸಹವಾಸ ಮಾಡಿ ಮಾನ ಕೂಡ ಕಳೆದುಕೊಳ್ಳಬೇಕೆಂದು ಳುವೆಯಾ?

ಅರ್ಜುನ—ಕೃಷ್ಣಾ, ಕ್ಷಮಿಸು, ಕ್ಷಮಿಸು! ನನ್ನ ಮಾತು ತೆಗೆದು ಕಬಾರದು. ನೀನು ಅದೊಂದು ಕೆಲಸ ಮಾಡಿದೆಯೆಂದರೆ, ಜಯ ಕ್ಷ್ಮಿಯು ನಮ್ಮ ಕೈಸೇರುವಳು. ಇನ್ನು ನಿನ್ನ ಚಿತ್ತ!

ಕೃಷ್ಣ—ಆಗಲಿ, ನೀನು ಧೈರ್ಯವಾಗಿರು. ನನ್ನಿಂದಾಗುವ ಹಾಯ ಮಾಡುತ್ತೇನೆ.

ಅರ್ಜುನ—ಹಾಗಾದರೆ ನಾನು ಕೃತಾರ್ಥನೆ ಸರಿ. ನಾವಿನ್ನು ವಕಾಶ ಮಾಡಕೂಡದು. ಕೂಡಲೇ ಹೊರಡಬೇಕು.

ಕೃಷ್ಣ—ಆಗಲಿ, ನಾಳೆಯೆ ಹೊರಡೋಣವಂತೆ.

ಮೂರನೆಯ ಪ್ರವೇಶ.

[ಸ್ಥಳ—ಅರಮನೆಯ ಮುಂದುಗಡೆ. ಬಲರಾಮನ ಪ್ರವೇಶ.]

ಬಲರಾಮ—(ಸ್ವಗತ)—ಕೌರವೇಶ್ವರನು ದ್ವಾರಾವತಿಗೆ ಬಂದಿರು ಬಂತೆ. ಆದರೆ, ಆತನು ಬಂದವನೆ ನಮ್ಮಲ್ಲಿಗೆ ಬಾರದೆ, ನೆಟ್ಟಗೆ ಕೃಷ್ಣ ಲ್ಲಿಗೆ ಹೋಗುವುದಕ್ಕೇನು ಕಾರಣ? ಅಂದು ಗದಾಯುದ್ಧ ಕಲಿಸಿದಾಗ

ನಾನಾತನ ಗುಣಗಳೆಲ್ಲವನ್ನೂ ಚೆನ್ನಾಗಿ ಕಂಡುಕೊಂಡಿದ್ದೇನೆ.
ಆತನಿಗೆ ತುಂಬ ವಿಶ್ವಾಸ. ನನಗೆ ಕೂಡ ಆತನಲ್ಲಿ ಎಷ್ಟರ
ಪ್ರೀತಿಯಿದೆ ಎಂಬುದು ಆತನಿಗೆ ಸ್ಪಷ್ಟವಾಗಬೇಕಿತ್ತು. ಏಕೆ?
ಯುದ್ಧ ಕಲಿಸುವ ವಿಷಯದಲ್ಲಿ ನಾನಾತನ ಪಕ್ಷಪಾತಿಯಾಗಿದ್ದುದು
ತಿಳಿಯದೆ? ನಮ್ಮ ಸಹೋದರಿ ಸುಭದ್ರೆಯ ವಿವಾಹದಲ್ಲಿ ಆತನಿಗೆ
ನಾನು ಮಾಡಿದ ಸಾಹಸಗಳಾದರೂ ಅಷ್ಟು ಬೇಗನೆ ಮರೆತು
ಲಾರವು!—ಕೃಷ್ಣನು ಕೇವಲ ವೈರಿ! ಏತಕ್ಕಾಗಿ ಆತನ ಬಳಿಗೆ
ಬೇಕು?—ಏನೋ ಗಹನವಾದ ಕಾರ್ಯಸಾಧನೆಯಾಗಬೇಕಾಗಿರಬ
ಒಂದು ವೇಳೆ ಹಾಗಿದ್ದರೆ ಅದಕ್ಕೆ ಕೃಷ್ಣನೇಕೆ? ಆತನಿಂದೇನಾ
ಸಕಲ ಸಹಾಯವೂ ನನ್ನಲ್ಲಿರುವುದು. ಕೃಷ್ಣನು ಕೂಡ ನನ್ನ
ಧಾರಿ!—ಎಷ್ಟೆಂದರೂ ಅರಸರ ಚಿತ್ತವು ಸ್ಥಿರವಲ್ಲ! ಅಷ್ಟು ಆನ
ವಾಗಿದ್ದು, ಈಗ ಮಾತ್ರ ನನ್ನಲ್ಲಿಗೆ ಬಾರದಿದ್ದರೆ—ನನ್ನ ಮಾನಕ್ಕೆ
ಲ್ಲವೆ? ಇಷ್ಟಾದರೂ ಜ್ಞಾಪಕಕ್ಕೆ ಬಾರದೆ ಹೋಯಿತು! ರಾಜ್ಯ
(ಆಲೈಸಿ)-ಏನೊ ಕಾಲಸಪ್ಪಳು ಕೇಳಿಸುವಂತಿದೆ. ಆರೊ ಈ ಕಡೆ
ತ್ತಿರಬೇಕು.—ಓಹೊ! ಕೌರವನೆ ಬಂದುಬಿಟ್ಟನು. ಈಗ ನಾನು ಕ
ಕೊಂಚ ಕೋಪಿಸಿಕೊಂಡವನಂತೆ ನಟಿಸಬೇಕು. ಮುಂದಕ್ಕಾ
ಆತನಿಗೆ ಬುದ್ಧಿಬಂದೀತು.

[ಸುಯೋಧನನು ಪ್ರವೇಶಿಸುವನು.]

ಬಲ—ಏನು, ಸುಯೋಧನಾ? ನಮ್ಮನ್ನಷ್ಟು ಬೇಗನೆ ಮ
ಬಿಟ್ಟೆಯಲ್ಲವೆ?

ಸುಯೋ—ರಾಮಾ, ಏನು ಮಾತು? ಮರೆತು ಬಿಡುವುದೆ
ಹೇಗಾದೀತು?

ಬಲ—ನಿನ್ನಂತಹ ರಾಜಾಧಿರಾಜರಿಗೆ ನಮ್ಮಂತಹ ಬಡವರು
ತಾನೆ ಕಾಣಿಸಿಕೊಂಡಾರು?

ಸುಯೋ—ಇಷ್ಟೆಲ್ಲ ನಂಜಿನ ಮಾತುಗಳೇಕೆ? ನಾನು ಮಾಡಿ
ಅಂತಹ ಅಪರಾಧವಾವುದು?

ಬಲ—ಅಪರಾಧವೆ? ನಿಮ್ಮಂತಹ ನೀತಿವಂತರು ಎಂದಾದರೂ ತಪ್ಪಿ ಳುವುದಿದೆಯೆ? ನೀವು ಮಾಡುವುದೆಲ್ಲ ನಿಮಗೆನೆ ಚಂದ!

ಸುಯೋ—ಏನಪ್ಪ! ನನಗೊಂದೂ ಅರ್ಥವಾಗುವುದಿಲ್ಲ.

ಬಲ—ಹೇಗೆ ತಾನೆ ಅರ್ಥವಾದೀತು? ನಿಮ್ಮ ನಿಮ್ಮ ಕಾರ್ಯ ಧನೆಯಾಗುವ ತನಕ ನಾವೆಲ್ಲರೂ ಬೇಕು. ಆ ಮೇಲೆ ನಮ್ಮನ್ನಾರು ಳುವರು?

ಸುಯೋ—ರಾಮಾ, ನಾನೇನು ತಪ್ಪುಮಾಡಿದ್ದರೂ ಕ್ಷಮಿಸ ೕಕು. ನೀನೇನು ಹೇಳುತ್ತಿರುವೆ? ಕೊಂಚ ವಿಶದವಾಗಿ ಹೇಳು, ಾಡೋಣ.

ಬಲ—ಹಾಗಾದರೆ ಕೇಳು. ನೀನು ದ್ವಾರಾವತಿಗೆ ಬಂದವನು ಟ್ಟಗೆ ನನ್ನಲ್ಲಿಗೆ ಬಾರದೆ, ಆ ಕೃಷ್ಣನಲ್ಲಿಗೇತಕ್ಕಾಗಿ ಹೋದೆ? ಬೆಣ್ಣೆಯ ಸೆಯಾಯಿತೆ? ಇಲ್ಲವೆ ಚೋರತ್ವ ಕಲಿತುಕೊಳ್ಳುವುದಕ್ಕಿತ್ತೆ?

ಸುಯೋ—ಇಷ್ಟೆ ತಾನೆ! ಹಾಗಾದರೆ ಕೇಳು. ಪಾಂಡವರಿಗೂ ಮಗೂ ರಾಜ್ಯಕ್ಕೋಸ್ಕರ ಯುದ್ಧವಾಗುವುದಕ್ಕಿದೆ!

ಬಲ—ಯುದ್ಧವಾಗುವುದಾದರೆ ಕೃಷ್ಣನಿಂದೇನು ಸಹಾಯ ಾದೀತು?

ಸುಯೋ—ಅದು ನನಗೆ ಮೊದಲೆ ಗೊತ್ತಿದೆ! ಆದರೆ 'ದುರ್ಜನಂ ್ಥಮಂ ವಂದೇ ಸಜ್ಜನಂ ತದನಂತರಂ' ಎಂದಿರುವುದು. ಹಾಗಲ್ಲವೆ? ತನು ಮಹಾ ಕುಟಿಲಬುದ್ಧಿಯುಳ್ಳವನು. ಏನಾದರೂ ಕುತಂತ್ರಗಳನ್ನು ಡಿಸಿದನೆಂದರೆ ನಮ್ಮ ಕಾರ್ಯಕ್ಕೆ ಭಂಗ ಬಂದೀತು! ಆದುದರಿಂದ ಆತ ನ್ನೆ ಮೊದಲು ಹೋಗಿ ನೋಡಿ ಬಂದುಬಿಟ್ಟೆ!

ಬಲ—ನಾನಿರುವಾಗ ಆತನ ಕುತಂತ್ರವೊಂದೂ ನಡೆಯಲಾರದು!

ಸುಯೋ—ಇನ್ನೇನೂ ಸಾಧ್ಯವಿಲ್ಲ. ಆತನ ಮಾತುಗಳಿಂದಲೆ ತನನ್ನು ಕಟ್ಟಿಬಿಟ್ಟೆ! ಅರ್ಜುನನು ಕೂಡ ಬಂದಿದ್ದನು. ಕೃಷ್ಣನೊಬ್ಬನು ಾತ್ರ ಪಾಂಡವರ ಪಕ್ಷ. ಯಾದವ ಸೈನ್ಯವೂ ನೀನೂ ನಮ್ಮ ಪಕ್ಷ.

ಅಷ್ಟು ಮಾತ್ರವಲ್ಲ. ಕೃಷ್ಣನು ಚಕ್ರ ಕೂಡ ಹಿಡಿಯುವುದಿಲ್ಲವೆಂ
ಕೊಂಡಿದ್ದಾನೆ! ನಮಗಿನ್ನೇನಾಗಬೇಕು, ಹೇಳು?

ಬಲ— ಹಾಗಾದರೆ ಸರಿ. ಪಾಂಡವರು ನಾಶವಾಗಿ
ದಿವಸ!

ಸುಯೋ— ಮತ್ತೇನು? ಬರಿಯ ಕೈಯಲ್ಲಿ ಕೃಷ್ಣನು ಮ
ದೇನು?

ಬಲ— ಒಳ್ಳೆಯದು ಮಾಡಿದೆ. ನಮ್ಮ ಸೈನ್ಯವೆಲ್ಲವನ್ನೂ
ಮಾಡಿಡುತ್ತೇನೆ. ಸಮಯ ಬಂದಾಗ ತಿಳಿಸಿಬಿಡು.

ಸುಯೋ— ಹಾಗೆಯೆ ಸರಿ.

ಬಲ— ಇರಲಿ. ಈಗ ಒಳಕ್ಕೆ ನಡೆ. ಕೊಂಚ ವಿ
ಕೊಳ್ಳೋಣ.

(ಹೋಗುವರು)

ನಾಲ್ಕನೆಯ ಪ್ರವೇಶ

[ಧರ್ಮನ ಆಸ್ಥಾನ:— ಧರ್ಮ, ಭೀಮ, ನಕುಲ ಮತ್ತು ಸಹದೇವ— ಕುಳಿತಿ

ಧರ್ಮ— (ದುಗುಡದಿಂದ)— ಭೀಮಾ, ಅರ್ಜುನನಿನ್ನೂ ಬ
ವಲ್ಲ!

ಭೀಮ— ಕೃಷ್ಣನಲ್ಲಿಗೆ ಹೋದರೆ ಹೇಗೆ ತಾನೆ ಬೇಗನೆ
ದಕ್ಕೆ ಸಾಧ್ಯ?

ಧರ್ಮ— ನಿಜ, ನಿಜ, ಸಾಕ್ಷಾತ್ ಭಗವಂತನಲ್ಲವೆ?
ಮೂಲಗಳನ್ನು ಭಕ್ಷಿಸಿಕೊಂಡು ಸಾವಿರಾರು ವರುಷಗಳ ಪರಿ

ಷ್ಟು ಮಾಡಿದರೂ ಕೂಡ ಆತನ ಚರಣಕಮಲಗಳ ಸಂದರ್ಶನವೆ
ರ್ಲಭ! ಹೀಗಿರುತ್ತ ಅಂತಹ ಮಹಾತ್ಮನ ಸನ್ನಿಧಿಯಲ್ಲಿರುವ ಸುಕೃತವು
ಶಟಿಸಿತೆಂದರೆ, ಆರಿಗೆ ತಾನೆ ಹಿಂದೆ ಬರುವುದಕ್ಕೆ ಕಾಲುಬಂದೀತು?

ಭೀಮ— ಹಾಲು ಮೊಸರಿಗೇನೂ ಕಡಿಮೆಯಿಲ್ಲ.

ಧರ್ಮ— ಎಷ್ಟಂದರೂ ಕ್ಷೀರಸಾಗರಶಾಯಿಯಲ್ಲವೆ? ಅಂತಹ
ಮಾತ್ಮನು, ತಾನೆ ಗೋಸೇವೆಯನ್ನು ಮಾಡಿ, ನಮ್ಮಂತಹ ಮೂಢಾ
ಗೆಲ್ಲ ಗೋಮಾಹಾತ್ಮ್ಯವನ್ನು ಸೂಚಿಸುತ್ತಾನೆ— ಆದರೆ, ಅರ್ಜುನನು
ೂದಕ್ಕಾಗಿ ಸಾವಕಾಶಮಾಡಿರಲಾರನು. ಪರಮಾತ್ಮನು ಸಹಾಯ
ಡುವುದಕ್ಕೊಪ್ಪಿಕೊಂಡನೊ, ಇಲ್ಲವೆ ಸಂಧಾನವಾಗಬೇಕೆಂದನೊ.
ೂ ವಿಶೇಷವಿರಬೇಕು!

ಭೀಮ— ಆದರೆ ನಮ್ಮನ್ನೆಂದಿಗೂ ಬಿಟ್ಟುಹಾಕಲಾರನು!

ಧರ್ಮ— ಭಕ್ತವತ್ಸಲನೆಂಬ ಬಿರುದನ್ನು ಎಷ್ಟು ಮಾತ್ರಕ್ಕೂ ಕೆಡಿಸಿ
ಳ್ಳಲೊಲ್ಲನು! ಇನ್ನು ನಮ್ಮ ಪೂರ್ವಪುಣ್ಯವಿದ್ದಂತಾಗುತ್ತಿದೆ!

ಕಂಚುಕಿ— (ಪ್ರವೇಶಿಸಿ)— ಜೀಯಾ! ಶ್ರೀ ಪರಮಾತ್ಮನು ಯುವ
ಜನೊಡನೆ ಚಿತ್ತೈಸುತ್ತಿರುವನು!

(ಹೋಗುವನು).

ಧರ್ಮ— (ಹರ್ಷದಿಂದ)— ಆಹಾ! ಹಾಗಾದರೆ ನಾವು ಧನ್ಯರೆ
!

ದಿಗೊಳ್ಳಲು ಎಲ್ಲರೂ ಎದ್ದು ನಿಲ್ಲುವರು. ಕೃಷ್ಣಾರ್ಜುನರು ಪ್ರವೇಶಿಸುವರು.)

ಧರ್ಮ— ಕೃಷ್ಣಾ, ಧರ್ಮನು ವಂದಿಸುವನು. (ಎಲ್ಲರೂ ನಮಸ್ಕರಿ
ವರು. ಕೂಡಲೆ ಕೃಷ್ಣನು ಧರ್ಮನನ್ನು ವಂದಿಸುವನು. ಧರ್ಮನು ಆತನನ್ನು
ಯುವನು) — ಏನು ನಿರಹಂಕೃತಿಯೊ? ಈ ದಾಸನು ಅಂತಹ ಭಾರ
ನ್ನು ವಹಿಸಿಕೊಳ್ಳಲು ಸಮರ್ಥನಲ್ಲ! ಇದೊ ಈ ಪೀಠವನ್ನು ಅಲಂಕರಿ
ೀಣಾಗಲಿ. (ಎಲ್ಲರೂ ಕುಳಿತುಕೊಳ್ಳುವರು) ಕೃಷ್ಣ, ಅನಾಥರ ಕೋರಿಕೆ
ನ್ನು ಸಲಿಸುವುದರಲ್ಲಿ ನಿನಗೆಷ್ಟುರ ಮಟ್ಟಿನ ಅವಸರವೊ? ನಂಬಿದವರಿಗೆ

ಇಂಬು ಕೊಡುವನೆಂಬ ಬಿರುದು ಸಾರ್ಥಕವಾಯಿತು. ಪ
ನಿನ್ನ ಕೃಪಾಕಟಾಕ್ಷವೊಂದಿಲ್ಲದಿರುತ್ತಿದ್ದರೆ, ನಮ್ಮ ಜನ್ಮಕ್ಕೆ ಪ

ಕೃಷ್ಣ—ಧರ್ಮಜ, ಸಾಕು. ಅದೆಲ್ಲವೂ ಮೊದಲಿ
ಈಗ ಅರ್ಜುನನ ಸಾರಥಿಯಾದ ಮೇಲೆ ಪರಮಾತ್ಮನದೇನು ಅ
ಧನ್ಯರೆಂದರೆ ನೀವೆ ಸರಿ!

ಧರ್ಮ—ನಿನ್ನನುಗ್ರಹವೊಂದಿದ್ದರೆ ನಮ್ಮ ಭಾಗ್ಯಕ್ಕೇ
ಕೊರತೆ ಬಂದೀತು?

ಕೃಷ್ಣ—ಧರ್ಮಜ, ಬಾಯುಪಚಾರವೆಲ್ಲವೂ ಸಾಕು.
ಲ್ಲರ ಅಭಿಪ್ರಾಯವೇನು? ಯುದ್ಧಮಾಡಿಯೆ ತೀರಬೇಕೆಂದೆಣಿಸಿರ

ಧರ್ಮ—ಕೃಷ್ಣಾ, ನನ್ನನ್ನೇಕೆ ಕೇಳುವೆ? ಭೀಮಾರ್ಜು
ಕೇಳಬಾರದೆ?

ಭೀಮ—ಏತಕ್ಕಾಗಿ ಯುದ್ಧಮಾಡಕೂಡದು?

ಅರ್ಜುನ—ನಾನೇಕೆ ಮತ್ತೆ ನಿನ್ನನ್ನಿಲ್ಲಿ ತನಕ ಕರೆ
ಬಂದಿರುವುದು?

ಕೃಷ್ಣ—ಆದರೆ ಪೂರ್ವಾಪರ ವಿಚಾರವಿಲ್ಲದೆ ದುಡುಕಬ

ಭೀಮ—ಏಕೆ? ಪೂರ್ವದ ವಿಚಾರವೆಲ್ಲವೂ ನಮ
ಬಂದಿದೆ. ಅಪರವೆಲ್ಲವೂ ಕೌರವನಿಗಿರಲಿ!

ಕೃಷ್ಣ—ಏನು? ಯುದ್ಧಮಾಡುವವರಾರು?

ಭೀಮ—ನಾವೆಲ್ಲರೂ ಇಲ್ಲವೆ?

ಕೃಷ್ಣ— ಚೆನ್ನಾಯಿತು! ನಿನ್ನ ಮಾತಿಗೆ ಮರುಳಾ
ಮೂಢನೆ ಸರಿ! ಎಲ್ಲಿಯಾದರೂ ತಿನ್ನುವುದಕ್ಕಿದೆಯೆ ನೋಡು!

ಭೀಮ—ನಿನ್ನ ಹಾಗೆ ನಾವೇನೂ ಹೆಣ್ಣಿಗರಲ್ಲ, ಬಲ್ಲೆಯಾ
ನಲ್ಲಿ ಕೈಲಾಗದಿದ್ದ ಹೇಡಿಗಳೆಂದೆಣಿಸಬೇಡ!

ಕೃಷ್ಣ—ನಿಜ, ನಿಜ, ಬಕಾಸುರನ ಬಾಯಿಗೆ ಬೆರಳಿಡಿಸಿದವನನ್ನು ಣೆನೆ?

ಭೀಮ—ಸ್ತ್ರೀಯರ ಸಮೂಹದಲ್ಲಿಯೆ ಬೆಳೆದ ನಿನಗೆ ಪೌರುಷವು ೇಗೆ ತಾನೆ ತಿಳಿದೀತು? ನಮ್ಮಿಂದೇನಾಗುವುದೆಂಬುದನ್ನು ನೀನೆ ನೋಡುವೆ ಂತೆ. ಆವುದಕ್ಕೂ ಯುದ್ಧ ಪ್ರಾರಂಭವಾಗಲಿ!

ಧರ್ಮ—ಭೀಮಾ, ವೃಥಾಲಾಪದಿಂದೇಕೆ ಕಾಲಹರಣ ಮಾಡ ೇಕು? ಪ್ರಕೃತ ಕಾರ್ಯವನ್ನು ಯೋಚಿಸಿದರಾಗದೆ?

ಕೃಷ್ಣ—ಅಹುದಹುದು. ಪ್ರಥಮತಃ ಸಂಗ್ರಾಮವೊ ಸಂಧಾನವೊ ಂಬುದು ನಿಶ್ಚಯವಾಗಬೇಕು.

ಭೀಮಾರ್ಜುನರು—ಸಂಧಿಯ ಮಾತು ತೀರಿತು, ಯುದ್ಧವೆ ೇ!

ಕೃಷ್ಣ—ಏನನ್ನುವೆ, ಧರ್ಮಾ?

ಧರ್ಮ—ಏನೆನ್ನಲಿ? ನನ್ನಿಂದಾಗಿ ಅವರೆಷ್ಟೊ ಕಷ್ಟಪಟ್ಟರು. ವರಿಷ್ಟವಿದ್ದಂತೆಯೆ ಆಗಲಿ. ಆದರೆ ಸಂಧಾನವೆ ಒಳ್ಳೆಯದೆಂದು ಕಾಣು ದೆ.

ಕೃಷ್ಣ—ಪಾಂಚಾಲಿಯೆಲ್ಲಿ? ಆಕೆಯನ್ನು ಕೇಳಬೇಕು!

ಭೀಮ—ಇದೊ, ಇಲ್ಲಿಯೆ ಬರುತ್ತಿರುವಳು!

ಪಾಂಚಾಲಿ—(ಪ್ರವೇಶಿಸಿ)—ಕೃಷ್ಣಾ, ಉದ್ಧರಿಸು! (**ನಮಸ್ಕರಿಸು ಳು.**)

ಕೃಷ್ಣ—ಹೇಗಿದ್ದಿಯಮ್ಮಾ, ಚೆನ್ನಾಗಿರುವೆಯಲ್ಲ?

ಪಾ—ನಿನ್ನ ಚಿತ್ತಕ್ಕೆ ತಿಳಿಯದೆ?

ಕೃಷ್ಣ—ಕೌರವನಲ್ಲಿ ಸಂಧಿಮಾಡಬೇಕೆಂದು ಯೋಚಿಸುತಿದ್ದೇವೆ. ನ್ನ ಮತವೇನು, ಹೇಳು ನೋಡೋಣ?

ಸಂಜಯ—(ಪ್ರವೇಶಿಸಿ)—ರಾಜನೆ ಜಯಶೀಲನಾಗ
ಸಂಜಯನು ವಂದಿಸುವನು.

ಧರ್ಮ—ಏನಯ್ಯ ಸಂಜಯಾ, ಹಸ್ತಿನಾವತಿಯ
ವೇನು? ಭೀಷ್ಮಾಚಾರ್ಯರು ಮುಂತಾದವರೆಲ್ಲರೂ ಸುಖವಾ

ಸಂಜ—ಶ್ರೀ ಕೃಷ್ಣನ ಅನುಗ್ರಹದಿಂದ ಇವ್ವರ ತನ
ಗಳೆ!

ಕೃಷ್ಣ—ಏನಯ್ಯ, ಕಪಟ ದ್ಯೂತದ ನೆವದಿಂದ ನೆಲವ
ಕೊಂಡು; ಪಾಂಡವರನ್ನು ಅಡವಿಗಟ್ಟಿದ ಕೌರವನಿಗೆ ಕುಶಲವೆ

ಭೀಮ—ನಿಮ್ಮೊಡೆಯನ ತೊಡೆಗಳು ಬಲವಾಗಿವೆಯಲ್ಲ
ದುಶ್ಶಾಸನಾದಿಗಳ ದೇಹದಾರ್ಢ್ಯಕ್ಕೇನೂ ಕೊರತೆ ಬಂದಿಲ್ಲವಲ್ಲ

ಅರ್ಜುನ—ಅಯ್ಯಾ, ವೀರಾಧಿವೀರರಾದ ಕರ್ಣಾದಿಗ
ಗೋಗ್ರಹಣದಿಂದ ತುಂಬ ಬಳಲಿ ಹೋದರು! ಈಗಲಾದರೂ
ವೆಲ್ಲವೂ ಪರಿಹಾರವಾಗಿರಬಹುದಲ್ಲವೆ?

ಪಾ—ಚಿತ್ರಸೇನನಿಂದ ಕಟ್ಟಿಸಿಕೊಂಡ ಭಾವಯ್ಯನವರು
ವರಲ್ಲವೆ?

ಸಂಜಯ—ನನ್ನನ್ನೇತಕ್ಕಾಗಿ ಈ ಪರಿ ಹೀಯಾಳಿಸು
ಬಂದ ಕಾರ್ಯವನ್ನು ಕೇಳಬಾರದೆ? ಯುದ್ಧ ವಿನಾ ರಾಜ್ಯ
ದೊರೆಯಲಾರದು! ಆದುದರಿಂದ, ಯುದ್ಧಕ್ಕೆ ಸನ್ನದ್ಧರಾಗಿ
ಹೇಳುವುದಕ್ಕೆ ಬಂದೆ.

ಧರ್ಮ—ಕೌರವನು ಸಂಧಿಗೊಲ್ಲನೆ?

ಸಂಜ—ಸಂಧಿಯೇತಕ್ಕೆ? ನೀವಂತೂ ರಾಜ್ಯ ಸೋತವ
ನಿಮಗೆ ಅಧಿಕಾರವೆಲ್ಲಿಂದ? ಕ್ಷಾತ್ರಧರ್ಮಕ್ಕನುಸಾರವಾಗಿ ಯು
ನೀವು ರಾಜ್ಯವನ್ನು ಪಡೆದುಕೊಳ್ಳಬೇಕು. ನಮ್ಮ ಅರಸನ
ಧರ್ಮತಪ್ಪುವನಲ್ಲ!

ಕೃಷ್ಣ—ವನವಾಸಿಗಳಿಗೆ ಪೃಥ್ವೀಪತಿಗಳೊಡನೆ ಕಾದಾಡುವ ಸತ್ವವು
ಗೆ ತಾನೆ ಉಂಟಾದೀತು? ಕಾದಾಟಕ್ಕಿಂತಲೂ ವನವಾಸವೆ ಮೇಲು!
ತ್ಮ ಕೌರವನ ಧರ್ಮಗಿರ್ಮವೆಲ್ಲ ಹಾಗಿರಲಿ? ಸತ್ಯವಿದ್ದರೆ ಪೃಥ್ವಿ
ರಕೀತು!

ಭೀಮ—ಆ ಖೂಳರನ್ನೆಲ್ಲ ಕ್ಷೈಮಿನಿಗೆ ಕಳುಹಿಸಿ ಬಿಡುತ್ತೇನೆ!
ರರನ್ನೊಂದು ಸಲ ರಣರಂಗಕ್ಕಿಳಿಸು!

ಅರ್ಜುನ—ದ್ಯೂತದ ಸಮಯದಲ್ಲಿ ಆಡಿದ ಭಾಷೆಯನ್ನು ನಾವಿನ್ನೂ
ರೆಯಲಿಲ್ಲವೆಂದು ಕೌರವನಿಗೆ ತಿಳಿಸು!

ಪಾ—ಅಂದು ಬಿಚ್ಚಿದ ಮುಡಿ ಇನ್ನೂ ಹಾಕಿಕೊಳ್ಳಲಿಲ್ಲ. ಇನ್ನಾ
ೂ ಹಾಕಿಸುವಂತೆ ಭಾವಯ್ಯನಿಗೆ ನನ್ನ ಅರಿಕೆಯನ್ನು ಹೇಳಿಬಿಡು!

ಧರ್ಮ—ಈತನ ಮೇಲೇಕೆ ಉರಿದು ಬೀಳುತ್ತೀರಿ? ಸ್ವಾಮಿ
ನ್ನು ಬಿಟ್ಟು ಸೇವಕನನ್ನು ಜರೆಯುವುದು ಏತರ ನ್ಯಾಯ?—ಅಯ್ಯಾ
ಜಯಾ! ಅವುದಕ್ಕೂ ನಾಳೆ ಕೃಷ್ಣನು ಬರುತ್ತಾನೆಂದು ಹೇಳು.

ಸಂಜಯ—ಹಾಗಾದರೆ ನನಗನುಜ್ಞೆಯಾಗಲಿ.

ಧರ್ಮ—ಒಳ್ಳೆಯದು.

(ಸಂಜಯನು ನಮಸ್ಕರಿಸಿ ಹೋಗುವನು.)

ಕೃಷ್ಣ—ಧರ್ಮ, ಏನು ಯೋಚಿಸುತ್ತಿರುವೆ?

ಧರ್ಮ—ನಿನಗೆ ತಿಳಿಯದೆ?

ಕೃಷ್ಣ—ನಾಳೆ ನಾನು ಹಸ್ತಿನಾವತಿಗೆ ಹೋಗಬೇಕೆ?

ಧರ್ಮ—ದಾಸನ ಮೇಲೆ ಅಷ್ಟೊಂದು ಅನುಗ್ರಹ ಮಾಡಿದರಾಗ
ಹುದು.

ಕೃಷ್ಣ—ಆಗಲಿ. ಅಲ್ಲಿಗೆ ಹೋಗಿ ಮಾಡತಕ್ಕುದೇನಿರುವುದು?

ಧರ್ಮ—ನ್ಯಾಯವಾಗಿ ಅರ್ಧ ರಾಜ್ಯವು ನಮಗೆ ಸಿಕ್ಕತಕ್ಕುದು.
ದರೆ, ಕೌರವನು ಕೊಡಲೊಲ್ಲನು. ಆದರೂ ಚಿಂತಿಲ್ಲ. ಅರ್ಧ ರಾಜ್ಯ

ಬೇಡ—ನಮಗೆ ಐವರಿಗೆ ಐದು ಗ್ರಾಮಗಳನ್ನಾದರೂ ಕೊಡಿಸಲ
ನಾವು ಅದರಲ್ಲಿಯೇ ಸಂತುಷ್ಟರಾಗುತ್ತೇವೆ!

ಕೃಷ್ಣ—ಧರ್ಮ, ಏನು ಮಾತು? ಐದು ಗ್ರಾಮ
ನೀತಿ? ಕೌರವನಲ್ಲಿ ಸಂಧಾನವೆಂದರೇನು? ಆತನು ನಿಮ್ಮನ್ನು
ಮಾಡುವುದಕ್ಕೆ ಎಣಿಸಿದುದೆಲ್ಲವನ್ನೂ ಮರೆತು ಬಿಟ್ಟಿಯಾ?

ಧರ್ಮ—ಹಾಗಲ್ಲ. ಕೃಷ್ಣಾ—ಅವರೆಷ್ಟೆಂದರೂ ಕೇವ
ಬಂಧುಗಳಲ್ಲವೆ? ಚಿಕ್ಕಂದಿನಿಂದಲೂ ಒಟ್ಟಿಗೆ ಬೆಳೆದವರು. ಅಂತ
ಹೇಗೆ ತಾನೆ ಯುದ್ಧ ಮಾಡಲಿ? ಅದರಲ್ಲಿಯೂ ಅಪಕೀರ್ತಿ ಬೇ
ಕ್ಕಿಂತಲೂ ಅಲ್ಪವಾದುದರಲ್ಲಿಯೆ ಸಂತುಷ್ಟರಾಗುವುದು ಮೇಲಲ್ಲ

ಕೃಷ್ಣ—ಕೌರವನು ಕೇವಲ ದ್ರೋಹಿ! ಹೇಗೆ ಅ
ಬೆರತುಕೊಂಡಿರುವಿರಿ?

ಧರ್ಮ—ಅವರವರ ಕರ್ಮಕ್ಕೆ ತಕ್ಕ ಫಲವು ಅವರವರಿ
ಕುವುದು! ಅವರನ್ನು ಕೊಂದು ನಾವೇಕೆ ಬಂಧುಹತ್ಯಾಪಾ
ಗಾಗಬೇಕು?

ಕೃಷ್ಣ—ಆಗಲಿ. ಆತನು ಒಂದು ವೇಳೆ ಐದು ಗ್ರಾ
ಕೊಡುವುದಕ್ಕೊಪ್ಪಿಕೊಂಡರೆ, ಆ ಐದು ಗ್ರಾಮಗಳಿಂದ ನಿಮಗೆ
ಮಹತ್ವವೇನು? ಐದನೆಯ ಒಂದಂಶವಾದರೂ ಕೊಡುವುದಕ್ಕೆ ಕ

ಧರ್ಮ—ಹೇಗೆ ಬೇಕಾದರೂ ಮಾಡು. ಕೊನೆಗೆ ಐದ
ಗಳು ಸಿಕ್ಕಿದರೂ ಸರಿಯೆ.

ಕೃಷ್ಣ—ಇರಲಿ. ಭೀಮಾದಿಗಳು ಏನನ್ನುವರೊ!

ಧರ್ಮ—ನನ್ನ ಅಭಿಪ್ರಾಯವು ಹೀಗಿದೆ. ಇನ್ನು ಅ
ಮಾಡು.

ಪಾ—(ಸ್ವಗತ) ಸರಿ. ಈಗ ಏನನ್ನುವರೊ, ನೋಡೋಣ

ಕೃಷ್ಣ—ಭೀಮಾ, ಏನು ಹೇಳುವೆ?

ಭೀಮ—ಅಣ್ಣಯ್ಯನಿಗೆ ಇಷ್ಟವಾದರೆ—ನಿನಗೆ ಸಮ್ಮತವಾದರೆ—ರವನು ರಾಜ್ಯ ಕೊಟ್ಟರೆ—ಮತ್ತೇನು ಬೇಕು? ಹಾಗೆಯೆ ಆಗಲಿ.

ಪಾ—(ಸ್ವಗತ) ಸರಿ, ಒಬ್ಬನಾಯಿತು!

ಕೃಷ್ಣ—ಅರ್ಜುನನ ಅಭಿಪ್ರಾಯವೇನು?

ಅರ್ಜುನ—ನನ್ನನ್ನೇನು ಕೇಳುವುದು? ಅವರಿಬ್ಬರಿಗೆ ಹೇಗೆಯೊ, ಾಗೆಯೆ ಸರಿ!

ಪಾ—(ಸ್ವಗತ)—ಇಬ್ಬರಾದರು!

ಕೃಷ್ಣ—(ನಕುಲಸಹದೇವರನ್ನು)—ನೀವೇನು ಹೇಳುವಿರಿ?

ಸಹದೇವ—ಅವರು ಮೂವರನ್ನು ನಾವು ಮಿಗುವರಲ್ಲ. ಆದರೆ, ರವನು ಸಂಧಿಗೊಪ್ಪುವನೆಂದು ನಾವೆಣಿಸುವುದಿಲ್ಲ.

ಪಾ—(ಸ್ವಗತ)—ಇಂದಿನ ದಿನದಲ್ಲಿ ಇವರೆಲ್ಲರೂ ಬಳೆದೊಟ್ಟವ ದರು!—ಇಲ್ಲ, ಅದಕ್ಕಿಂತಲೂ ಕಡೆಯೆ ಸರಿ!

ಕೃಷ್ಣ—ನಿಮ್ಮ ಅಭಿಪ್ರಾಯಗಳೆಲ್ಲ ಹಾಗಿರಲಿ. ಪಾಂಚಾಲೀ, ನ್ನಿಷ್ಟವಾವುದು, ಹೇಳು ನೋಡೋಣ?

ಪಾ—(ರೋಷಾವೇಶದಿಂದ)—ನನ್ನ ಇಷ್ಟವೇನು? ಇವರೆಲ್ಲರೂ ತ್ರಿಯ ಪತಿಗಳೆನ್ನಿಸುವುದಕ್ಕಿಂತಲೂ ಪತ್ನಿಯರಾಗಿದ್ದರೆ ಲೇಸಾಗಿತ್ತು!

ಕೃಷ್ಣ—ಹಾಗಲ್ಲ, ದುಡುಕಬೇಡ. ಸಾಹಸ ಕಡಿಮೆಯಾಗಿ ಾಮದ ಯೋಚನೆಯಲ್ಲ! ಕೌರವನು ದುಷ್ಕರ್ಮಿಯೆ ಅಹುದು. ನಿಮ್ಮನ್ನು ಹಳವಾಗಿ ಪೀಡಿಸಿದವನು, ಅದೆಲ್ಲವೂ ನಿಜ. ಆದರೆ, ಅವರು ಮಾಡಿ ದನ್ನು ಅವರವರೆ ಅನುಭವಿಸಲಿ!

ಪಾ—ಆದರೆ, ಕೃಷ್ಣಾ—ಅವರ ದುಷ್ಕರ್ಮದ ಫಲವನ್ನು ಅನು ವಿಸುವುದಕ್ಕೆ ಮಾತ್ರ ನಾವಾದೆವಲ್ಲವೆ? ವಾಯುಪುತ್ರನಲ್ಲಿಯಾದರೂ ೈರ್ಯವಿರುವುದೆಂದೆಣಿಸಿದ್ದೆ. ಆಡಿದ ಮಾತಿಗೆ ತಪ್ಪುವನಲ್ಲವೆಂಬ ಭರ ಸೆಯಿತ್ತು. ಇಷ್ಟಾಗಿ ಕೌರವನಲ್ಲಿ ಆತನಿಗೆ ಬದ್ಧದ್ವೇಷ. ಆದರೂ

ಈಗ ಮಾತ್ರ ಹೇಡಿಯಂತೆ ಸಂಧಿಗೊಡಂಬಟ್ಟುದು ಕೇವಲ ಅ
ಸಲ!—(ಪಾಂಡವರೊಡನೆ)—ಬಹುಶಃ ಈಗ ನೀವೆಲ್ಲರೂ ಯ
ತ್ತಿಕೊಂಡಿರಲ್ಲವೆ? ರುದ್ರಾಕ್ಷಿಮಾಲೆ ಇಲ್ಲವಲ್ಲ! ಸಿಂಧೂ
ಕೊಂಡು ಈಗ ಮಾತ್ರ ಧೀರುಗಳಾಗಿರಲ್ಲವೆ?—(ಭೀಮನೊಡನೆ)—
ವಸ್ತ್ರಕ್ಕೆ ಬಿಸಾಡಿದುದು? ಈ ಗದೆಗಿಂತಲೂ ಅದುವೆ ಚೆನ್ನಾಗಿ ಬ

ಕೃಷ್ಣ—ಪಾಂಚಾಲೀ, ಕೊಂಚ ಸೈರಿಸಿಕೊ. ಸಕಿ
ಅನುಚಿತವಲ್ಲವೆ? ಆವ ಕಾರಣದಿಂದ ಸಾವುಕೆಟ್ಟುಕೊಂಡರೆ
ಕೊಂಚ ಯೋಚಿಸಿ ನೋಡು!

ಪಾ—ಕೃಷ್ಣಾ, ಕಾರಣಗೀರಣ ಒಂದೂ ನಾನೊಲ್ಲೆ!
ರಾಗಿ ಹುಟ್ಟಿ ಭಾಷೆ ತಪ್ಪುವವರು ಇನ್ನೆಷ್ಟರ ಮಟ್ಟಿನ ನೀತಿ
ಇವರ ವೇಷಕ್ಕೆ ಪಲ್ಲಟ ಬಂದಂತೆ ಶೌರ್ಯಕ್ಕೂ ಬಂದುಬಿಟ್ಟಿತೆ
ಹಾ! ನನ್ನಂತಹ ಪಾಪಿನಿಯು ಮೂರು ಲೋಕದೊಳಗೂ ಇ
ಒಬ್ಬಳು ಸ್ತ್ರೀಗೆ ಒಬ್ಬನೆ ಗಂಡನು. ಆದರೂ ಆತನು ಆಕೆಯನ
ಪ್ರೀತಿಯಿಂದಲೂ ಜಾಗರೂಕತೆಯಿಂದಲೂ ನೋಡಿಕೊಳ್ಳುತ್ತಾ
ಈ ಮಂದಭಾಗ್ಯೆಗೆ ಐವರು ಪತಿಗಳಿದ್ದರೂ ನಿಷ್ಫಲವೆ ಆಗಿಹೋ
ಅಂದು—ಆ ಖೂಳ ದುಶ್ಶಾಸನನು ಮುಂದಲೆ ಹಿಡಿದೆಳೆದು ಸಭೆಗೆ
ಪ್ರತಿಮೆಗಳಂತೆ ನಿಂತುಕೊಂಡು ವಿನೋದವನ್ನು ನೋಡುತ್ತಿ
ಆಹಾ!—(ಪಾಂಡವರಿಗೆ)—ಆ ನೀಚರಿಗೆ ನೀವು ಬೆದರಿ ಸಂಧಿಯನ್ನ
ರಾದರೆ—ನಿಜವಾಗಿಯೂ ನಾನೀ ಪ್ರಾಣಗಳನ್ನಿಟ್ಟುಕೊಂಡಿರಲಾ
ಬಿಟ್ಟು ಹೋಗಬಾರದೆಂದು ಕಾಡುಗುತ್ತಗಳೆಲ್ಲವನ್ನೂ ಸುತ್ತಿದ್ದೆನ
ವೃತ್ತಿಯನ್ನು ಸ್ವೀಕರಿಸಿದೆನು. ಮಾನವನ್ನು ಕೂಡ ಕಳೆದು
ಸಂಭವ ಬಂತು! ನಮ್ಮ ಈ ಕಷ್ಟಗಳಿಗೆಲ್ಲ ಕಾರಣಭೂತರಾದ ಅ
ರಲ್ಲಿ ಈಗ ಸಂಧಿಯಂತೆ! ಇದೆಲ್ಲವೂ ನಿಮಗೆನೆ ಚಂದ!—(ರೋ

ಭೀಮ—(ಸ್ವಗತ)—ಆಹಾ! ಈಕೆಯು ಅಳುವುದ
ಬಿಟ್ಟಳು! ಇದನ್ನು ನಾನು ನೋಡಲಾರೆ. ಹೇಗಾದರೂ ಸ
ಪಡಿಸಬೇಕು. (ಪ್ರಕಾಶ)—ಪಾಂಚಾಲೀ ಸೈರಿಸು. ನಿನ್ನ ಬೇಗೆ
ಕೊಡದು. ನಾನೇನು ಮಾಡಬೇಕೊ ಹೇಳು!

ಪಾ—ಆಹಾ! ನಿನ್ನನ್ನು ನಾನರಿಯೆನೆ? ನನ್ನ ಆಪತ್ಕಾಲಕ್ಕೊದಗು
ು ನೀನೆ ಸರಿ! ಯಮಪುತ್ರನಂತೂ ಸರ್ವದಾ ಶಾಸ್ತ್ರೋಕ್ತ ಧರ್ಮ
ಲ್ಲಿಯೆ ಸರಿ. ಉಳಿದವರು ಅಗ್ರಜನ ಮಾತನ್ನು ಮೀರುವರಲ್ಲ. ಅಲ್ಲದೆ
ೋದರೆ, ಮೊನ್ನೆ ಕೀಚಕನನ್ನು ಕೊಂದುಕೊಡುತ್ತಿರಲಿಲ್ಲವೆ? ಇನ್ನು
ುಗಿಷ್ಟೆಲ್ಲ ಕಷ್ಟಕೊಟ್ಟ ಆ ದುಷ್ಟರನ್ನು ಹೇಗೆ ತಾನೆ ನಿರ್ಮೂಲ
ಾಡದೆ ಇರಬಹುದು?

ಭೀಮ—ಅದೆಲ್ಲವೂ ಸರಿಯೆ. ಆದರೆ, ತಾಯಿಯ ಗರ್ಭದಿಂದ
ಿದ ಮೊದಲುಗೊಂಡು ನಾನೊಂದು ದಿನವಾದರೂ ಸುಖವನ್ನನು
ವಿಸಲಿಲ್ಲ! ಅದರ ಮೇಲೆ ವನಸಂಚಾರ ಬೇರೆ. ಮೊನ್ನೆ ಕೀಚಕನನ್ನು
ಂದ ಮೇಲೆಯಂತೂ ನನ್ನ ಶಕ್ತಿಯು ತೀರ ಕುಂದಿಹೋದಂತಿದೆ!
ದುದರಿಂದ, ಕೌರವರಲ್ಲಿ ಹೇಗೆ ತಾನೆ ಯುದ್ಧವು ಸಾಧ್ಯ?

ಪಾ—ಚೆನ್ನಾಯಿತು, ಚೆನ್ನಾಯಿತು! ಶೂರನೆ ಸರಿ! ಕೌರವನ ರಕ್ತ
ಲ್ಲಿ ನನ್ನ ಜಡೆಯನ್ನು ಮುಳುಗಿಸಿ ಕರುಳುಗಳನ್ನು ಮುಡಿಸುವ ಆ
ತಿಜ್ಞೆಯು ಈಗೆಲ್ಲಿ ಅಡಗಿಕೊಂಡಿತು? ಸೀರೆಯನ್ನುಟ್ಟುಕೊಂಡು ಬಳೆ
ೊಟ್ಟುಕೊಳ್ಳಬಾರದೆ? ಧನುರ್ಬಾಣಗಳನ್ನೀಚೆಗೆ ಕೊಡಿಸೋಣಾಗಲಿ!
ಾನೆ ಪುರುಷವೇಷವನ್ನು ಧರಿಸಿಕೊಂಡು ಶತ್ರುಗಳನ್ನು ನಿರ್ನಾಮಮಾಡಿ
ಡುತ್ತೇನೆ!

ಕೃಷ್ಣ—ಏನು ಮಾತು? ಪುರುಷವೇಷವಂತೆ, ಶತ್ರುಗಳ ನಿರ್ನಾಮ
ರಂತೆ!

ಪಾ—ಪುರುಷರಾದವರೆ ಸ್ತ್ರೀಯರಂತಿದ್ದರೆ, ಮತ್ತಾರು ತಾನೆ
ಯುದ್ಧಮಾಡತಕ್ಕವರು?—ನಿಮ್ಮ ಹಂಗು ಬೇಡಲೆ ಬೇಡ! ಐವರು
ಮಕ್ಕಳೂ ಘಟೋತ್ಕಚನೂ ನನ್ನ ಮಾತು ಮೀರುವರಲ್ಲ. ನಮ್ಮ ತಂದೆಗೆ
ನೂರು ಅಕ್ಷೋಹಿಣೀ ಬಲವಿರುವುದು. ಇವರಿಂದ ಕುರುಕುಲವನ್ನು
ಸುಟ್ಟುಬಿಡುತ್ತೇನೆ. ನನಗನುಜ್ಞೆಯಾಗಲಿ!

ಭೀಮ—ಪಾಂಚಾಲಿ, ಸಾಕು! ನೀನು ನಿಶ್ಚಿಂತಳಾಗಿರು. ಕುರು
ಕುಲವೆಲ್ಲವೂ ರಣರಂಗದಲ್ಲಿ ಹೊರಳಾಡುವುದನ್ನು ಶೀಘ್ರದಲ್ಲಿಯೆ ಕಣ್ಣಾರೆ

ನೋಡುವೆ! ಕೃಷ್ಣಾ, ಇನ್ನು ಸಂಧಿಯು ಮಾತು ಬಿಟ್ಟುಬಿದು
ಹೇಳಿ ಅಣ್ಣಯ್ಯನಿಗೆ ಯುದ್ಧಮಾಡುವುದಕ್ಕೆ ಮನಸ್ಸಿಲ್ಲವಾದರೆ
ಸಂಧಿಯನ್ನೆ ಮಾಡಿಕೊಂಡು ಗ್ರಾಮಗಳನ್ನು ಪಡೆದುಕೊಳ್ಳಲಿ.
ನಾನು ಮಾತ್ರ ಯುದ್ಧ ಮಾಡಿಯೆ ತೀರಬೇಕು!

ಕೃಷ್ಣ—ಧರ್ಮ್ಮ, ಇವರಿಬ್ಬರ ಮತವೆ ಬೇರೆಯಾಯಿತು
ಏನು ಹೇಳುವೆ, ಸಂಧಿಯೊ ಸಂಗ್ರಾಮವೊ?

ಧರ್ಮ—ಕೃಷ್ಣಾ, ಪೂರ್ವಜನ್ಮದಲ್ಲಿ ನಾವೇನೋ
ಪಾತಕವನ್ನು ಮಾಡಿರಬೇಕು. ಊರನ್ನು ಬಿಟ್ಟು ಕಾಡು
ಆದರೂ, ನೀನು ಮಾತ್ರ ನಮ್ಮನ್ನು ಬಿಟ್ಟುಹಾಕಲಿಲ್ಲ. ಎ
ನಾವು ಅನಾಥರೆ ಸರಿ! ಅರಸರಲ್ಲೇಕೆ ನಮಗೆ ಕಲಹ? ಜಯ
ಗಳನ್ನಾರು ಬಲ್ಲರು? ಅದೂ ಅಲ್ಲದೆ, ಬಂಧುಹತ್ಯಾದೋಷ ಬೇರೆ
ವನ್ನೂ ವಿಚಾರಿಸಿ ನೋಡಿದರೆ—ಕೃಷ್ಣಾ, ನಮಗೆ ದೊರೆತನ
ಬಡತನವೆ ಸಾಕು! ಕೌರವನು ಸುಖಿಯಾಗಿದ್ದಾನೆಂದು ಮಾತ್ರ
ಸರಿ! ಆದುದರಿಂದ ಸಂಧಿಯೆ ಲೇಸಾಗಿ ಕಾಣುತ್ತಿದೆ. ಇನ್ನು
ನಾದಿಗಳನ್ನು ಕೇಳಿಕೊ!

ಅರ್ಜುನ—ಸಂಗ್ರಾಮವೆ ಸಿದ್ಧ! ಕೌರವನ ಕೌಟಿಲ್ಯ
ಮರೆಯಲೊಲ್ಲೆವು!

ಧರ್ಮ—ಹಾಗಾದರೆ—ಕೌರವನು ಸಂಧಿಗೆ ಒಪ್ಪದೆ ಹೋ
ಸಂಗ್ರಾಮವನ್ನು ನಿಶ್ಚೈಸಿಕೊಂಡು ಬಾ!

ಪಾಂಚಾಲಿ—ಕೃಷ್ಣಾ! ಹೇಗಾದರೂ ಸಂಗ್ರಾಮವನ್ನೆ
ಕಟ್ಟು! (ನಮಸ್ಕರಿಸುವಳು).

ಕೃಷ್ಣ—ಅಮ್ಮಾ, ಭಯಪಡಬೇಡ. ಕುರುಕುಲವೆಲ್ಲ
ನಿರ್ಮೂಲಮಾಡಿಸಿಕೊಡುವ ಕಾರ್ಯವು ನನ್ನದು!

(ತೆರೆ ಬೀಳುವುದು).

ಎರಡನೆಯ ಅಂಕ.

ಮೊದಲನೆಯ ಪ್ರವೇಶ.

[ಸ್ಥಳ:—ಹಸ್ತಿನಾವತಿ, ಧೃತರಾಷ್ಟ್ರನ ಕಿರುಮನೆ.]

ಧೃತ—ಹಾಹಾ! ವಿಧಿಯೇ! ಶೂರರೂ ಧೀರರೂ ಆದ ನೂರು […]ಮಂದಿ ಮಕ್ಕಳಿದ್ದರೂ ಸಾರ್ಥಕವಾಗಲಿಲ್ಲ. ಎಲ್ಲರೂ ಕುಟಿಲ ಬುದ್ಧಿ[…]ಯುಳ್ಳವರಾಗಬೇಕೆ? ಕಪಟದ್ಯೂತವನ್ನಾಡಿ ಪಾಂಡುಪುತ್ರರನ್ನು ವನವಾಸ[…]ಕ್ಕಟ್ಟಿದರು. ಅವರಾದರೊ ಸತ್ಯಕ್ಕೋಸ್ಕರ ಹನ್ನೆರಡು ವರುಷ ಕಷ್ಟಪಟ್ಟರು. [ಶ್]ರೀಕೃಷ್ಣನ ಅನುಗ್ರಹವು ಅವರ ಮೇಲೆ ಪರಿಪೂರ್ಣವಾಗಿರುವುದು. [ಕೃ]ಷ್ಣನು ಅವತಾರಪುರುಷನೆಂಬುದನ್ನರಿಯರೆ? ಪಾಂಡುಪುತ್ರರೊಡನೆ ವೈರ[…]ವೆಂದರೆ ಕೃಷ್ಣನೊಂದಿಗೆ ವೈರವಾಗಲಿಲ್ಲವೆ? ಕೃಷ್ಣನ ಕೂಡೆ ವೈರವನ್ನು ಕಟ್ಟಿಕೊಂಡು ಆರು ತಾನೆ ಬಾಳಬಲ್ಲರು?—ನಿಜವಾಗಿಯೂ, ನನ್ನ ಪುತ್ರರಿಗೆ ಅವಸಾನವು ಸಮೀಪಿಸಿತು,—ಇರಲಿ, ನಾನೊಂದು ಬುದ್ಧಿಮಾತು ಹೇಳಿಬಿಡುತ್ತೇನೆ.—ಸುಯೋಧನನು ಇನ್ನು ಬರಲಿಲ್ಲವಲ್ಲ! ಆ ಕುಬುದ್ಧಿಗಳೊಡನೆ ಏನು ಕುತಂತ್ರಗಳನ್ನು ನಡೆಸುತ್ತಿದ್ದಾನೆಯೊ!

(ಸುಯೋಧನನು ಪ್ರವೇಶಿಸುವನು.)

ಸುಯೋ—ಪಿತನೆ, ಸುಯೋಧನನು ವಂದಿಸುವನು.

ಧೃತ—ಆಹಾ, ಬಂದೆಯಾ, ಮಗನೆ? ಇಷ್ಟು ಸಾವಕಾಶವೇತಕ್ಕಾಯಿತು?

ಸುಯೋ—ಕೊಂಚ ರಾಜಕಾರ್ಯವಿದ್ದಿತು.

ಧೃತ— ಅದೇನು ನಾನು ಕೇಳಬಾರದೆ?

ಸುಯೋ— ವಿಶೇಷವೇನೂ ಇಲ್ಲ. ಸಂಜಯನು
ಸಂಪತ್ತನ್ನೂ ಸಾಹಸವನ್ನೂ ಶ್ಲಾಘಿಸುತ್ತಿದ್ದನು. ಆತನನ್ನು
ಉಚ್ಚಾಟನಮಾಡಿಸಿ ನಮ್ಮ ಕರ್ಣಶಕುನಿಗಳೊಂದಿಗೆ ಕೂಡ
ಲೋಚನೆ ಮಾಡುವುದಕಿತ್ತು.

ಧೃತ— ಮಗೂ, ಸಂಜಯನು ತುಂಬ ಜ್ಞಾನಿಯು;
ವಿಚಾರವಿಲ್ಲದೆ ಮಾತುಗಳನ್ನಾಡನು. ಅದೂ ಅಲ್ಲದೆ ಪಾಂ
ಸಂಪತ್ತೂ ಸಾಹಸವೂ ಶ್ಲಾಘನೀಯವೆ ಸರಿ!

ಸುಯೋ— ಪಿತನೆ, ಇನ್ನೇನಾದರೂ ಇದ್ದರೆ ಹೇಳಬಾರದೆ
ಸಂಪನ್ನರೂ ಸಾಹಸಿಗಳೂ ಆಗುವುದಕ್ಕೆ ಈಡಿಗಿರುವವರು ಭೀಮ

ಧೃತ— ಸಕಲಕ್ಕೂ ಶ್ರೀ ಕೃಷ್ಣನೆ ಸೂತ್ರಧಾರಿ. ಆತನೆ ಅ
ವಾಗ ಅವರಿಗೇನು ತಾನೆ ಕೊರತೆ?

ಸುಯೋ— ಕೃಷ್ಣನ ಮಾತು ಇನ್ನು ಪ್ರಯೋಜನವಿಲ್ಲ.
ಯುದ್ಧಮಾಡುವುದಿಲ್ಲವೆಂದು ಒಪ್ಪಿಕೊಂಡಿರುತ್ತಾನಷ್ಟೆ!

ಧೃತ— ತಾನು ಮಾಡದಿದ್ದರೇನಾಯಿತು? ಎರಡನೆಯ
ಮಾಡಿಸುತ್ತಾನೆ.

ಸುಯೋ— ಎರಡನೆಯವನು ಬಂದರೆ ನಮ್ಮಲ್ಲಿ ಕರ್ಣಾದಿಗ

ಧೃತ— ಮಗೂ, ನೀನು ಕರ್ಣಾದಿಗಳನ್ನು ನಂಬಿಕೊಂಡು
ಬೇಡ. ಗುಣಾವಗುಣಗಳು ಸಹವಾಸವನ್ನು ಹೊಂದಿಕೊಂಡಿವೆ
ನಿಯು ಮಹಾ ಮತ್ಸರಿಯು. ನಿನಗೆ ಆತನು ಕೇವಲ ಆಪ್ತನು.
ದುರ್ಬೋಧನೆಗಳೊಳಗಾಗಬೇಡ. ಶ್ರೀ ಕೃಷ್ಣನು ಪಾಂಡವರ
ಮೇಲೆ ನಿನಗೆಷ್ಟು ಮಾತ್ರಕ್ಕೂ ಜಯ ಸಿಕ್ಕಲಾರದು. ಭೀಷ್ಮಾಚಾ
ದ್ರೋಣಾಚಾರ್ಯರು, ವಿದುರ— ಮೊದಲಾದವರನ್ನು ಕೇಳಿಕೊ.

ಸುಯೋ—ಪಿತನೆ, ಪಾಂಡುಪುತ್ರರು ಮಾತ್ರ ಶೂರರು, ನಾವು ಅಲ್ಪರೆಂದೆಣಿಸಿರುವೆಯಲ್ಲವೆ? ಕರ್ಣನು ಸಾಮಾನ್ಯನೆ? ದ್ರೋಣಾಚಾರ್ಯರು ಗುರುಗಳಲ್ಲವೆ? ಅಶ್ವತ್ಥಾಮನೊಬ್ಬನೆ ಸಾಲನೆ? ನಾವು ಕೇವಲ ಹೇಡಿಗಳೆಂಬ ಅಭಿಪ್ರಾಯವಿದ್ದರೆ ಅದನ್ನಿಂದಿಗೆ ಬಿಟ್ಟುಬಿಡು.

ಧೃತ—ಮಗೂ, ನೀವೆಲ್ಲರೂ ವೀರರೆ ಅಹುದು. ಆದರೂ ಕೃಷ್ಣನೊಡನೆ ವೈರವು ಸಲ್ಲದು. ಹೇಗಾದರೂ ಸಂಧಿಯನ್ನೇ ಮಾಡಬೇಕಲ್ಲದೆ ಸಂಗ್ರಾಮು ಬೇಡ.

ಸುಯೋ—ಇಷ್ಟು ಹೇಳುವುದಕ್ಕೆ ತಾನೆ ನನ್ನನ್ನು ಕರೆಯಿಸಿದ್ದುದು? ನೀನೂ, ದ್ರೋಣಾಚಾರ್ಯರೂ ಭೀಷ್ಮಾಚಾರ್ಯರೂ, ಕೃಪಾಚಾರ್ಯರೂ, ಸಂಜಯನೂ ಹೋಗಿ, ಧರ್ಮನನ್ನು ಮರೆಹೊಕ್ಕು ಬಾಳಿಕೊಂಡಿರಿ. ನಾವು ನಮ್ಮ ಕಾರ್ಯವನ್ನು ಮಾಡುತ್ತೇವೆ! ಇನ್ನು ನನಗನುಜ್ಞೆಯಾಗಲಿ! (**ಹೋಗುವನು**).

ಧೃತ—ಆಹಾ! ಗಾಂಧಾರಿಯು ಏತಕ್ಕಾಗಿ ಈತನನ್ನು ಸಾಕಿ ಸಲಹಿದಳೊ? ಅಂದೇ ಹಿಸುಕಿಬಿಟ್ಟಿದ್ದರೆ ಚೆನ್ನಾಗಿರುತಿತ್ತು!

ಎರಡನೆಯ ಪ್ರವೇಶ.

[ಗೃಹ: ವಿದುರನೂ ಕನಕಾಂಗಿಯೂ.]

ವಿದುರ—ಶ್ರೀ ಕೃಷ್ಣನು ಹಸ್ತಿನಾವತಿಗೆ ಬರುತ್ತಾನಂತೆ. ಇಂದಾದರೂ ಆತನನ್ನು ಕಣ್ಣಾರೆ ಕಂಡು ಜನ್ಮ ಸಾರ್ಥಕ ಮಾಡಿಕೊಳ್ಳಬೇಕು.

ಕನಕಾಂಗಿ—ಆರಲ್ಲಿ ಇಳಿದುಕೊಳ್ಳುತ್ತಾನಂತೆ?

ವಿದು—ಆರಲ್ಲಿಯೊ, ತಿಳಿಯದು. ಆ ವಿಚಾರವನ್ನೇನೂ ಹೇಳಿ ಕಳುಹಿಲ್ಲ.

ಕನ—ಹಾಗಾದರೆ ಕೌರವನಲ್ಲಿ ಹೋದಾನು.

ವಿದು—ನಾನು ನಂಬಲಾರೆ. ಕೌರವನಿಗೆ ಕೇವಲ ಪ ಪಕ್ಷದವನು. ಭೀಷ್ಮಾಚಾರ್ಯರಲ್ಲಿಗೆ ಹೋದಾನು.

ಕನ—ಕೃಪೆಯು ತಮ್ಮಲ್ಲಿಗೆ ಬರಲಿಕ್ಕೆ ಸಾಕೆಂದು ಹೇ ಬೇಕಾದ ಏರ್ಪಾಡುಗಳನ್ನು ಮಾಡಿಸಿದ್ದಾರಂತೆ.

ವಿದು—ಮಾಡಿಸಲಿಕ್ಕೆ ಎಲ್ಲರೂ ಮಾಡಿಸಿದ್ದಾರೆ. ಆದ ಪರಮಾತ್ಮನಿಗೆ ಆರಲ್ಲಿ ಇಷ್ಟವೋ ಹೇಳಲಸಾಧ್ಯ.

ಕನ—ನಮ್ಮಲ್ಲಿಗೆ ಬರುವ ಹಾಗೆ ಇಲ್ಲವಲ್ಲ?

ವಿದು—ಬರಬಾರದೆಂದು ನಿಶ್ಚೈಸ್ಸವೆ?

ಕನ—ಹಾಗಲ್ಲ. ನಾವೇನು ಉಪಚಾರಮಾಡಬಲ್ಲೆವು? ಲ್ಲೇನು ಇರುವುದು?

ವಿದು—ಸಹಜ, ಅಂತಹ ಶ್ರೀಮಂತರುಗಳಿರುವಾಗ ನಮ ಬಂದಾನೆಂದು ಸ್ವಪ್ನದಲ್ಲಿ ಕೂಡ ಎಣಿಸುವುದಕ್ಕೆ ಬಾರದು.

ಕನ—ಕೌರವನಿಂದ ಕೊಂಚ ಐಶ್ವರ್ಯ ಕೇಳಿಕೊಳ್ಳಬಾರದ ಹಾಗಿದ್ದರೆ ನಾವು ಕೂಡ ಇತರರಂತೆ ತಲೆಯೆತ್ತಿಕೊಂಡಿರಬಹುದಿತ್ತು!

ವಿದು—ಐಶ್ವರ್ಯವು ಏನು ತಾನೆ ಮಾಡೀತು! ಅವನಲ್ಲಿ ಕೌರವನಲ್ಲಿ ಕೇಳಿಕೊಳ್ಳುವುದೆ? ಆತನು ಸಾಕ್ಷಾತ್ ಕಲಿಪುರುಷನು! ನೊಡನೆ ಕೇಳುವುದಕ್ಕಿಂತ ಉಪವಾಸಬಿದ್ದು ಪ್ರಾಣತ್ಯಾಗಮಾಡ ವೇಲು!

ಕನ—ಹಾಗಾದರೆ ಆತನಲ್ಲಿಗೇಕೆ ನಿತ್ಯವೂ ಹೋಗಿ ಬಂ ನಮ್ಮ ಕೌರವ, ನಮ್ಮ ಕೌರವ—ಎಂದುಕೊಂಡಿರುವುದು? ಪಾಂ ಬಳಿಗಾದರೂ ಹೋಗಬಾರದೆ?

ವಿದು—ಅದು ಹೇಗಾದೀತು? ಇದು ತನಕವೂ ಕೌರವನ ಇದ್ದುಕೊಂಡು, ಈಗ ಮಾತ್ರ ಪಾಂಡವರ ಬಳಿಗೆ ಹೋದರೆ ಸ ದ್ರೋಹ ಉಂಟಾಗುವುದಲ್ಲವೆ?

ಕನ— ಇಂತಹ ಸ್ವಾಮಿಯ ಸೇವೆ ಮಾಡುವುದಕ್ಕಿಂತ ಚಾಂಡಾಲ ಸೇವೆಯೆ ಉತ್ತಮವೆಂದು ಕಾಣುತ್ತಿದೆ!

ವಿದು— ಹಾಗನ್ನಬೇಡ. ಕೌರವನು ಸಕಲವನ್ನೂ ಬಲ್ಲವನು, ಶೂರನೂ ಅಹುದು. ಆದರೆ ಆತನ ಸಹವಾಸ ಮಾತ್ರ ಒಳ್ಳೆಯದಲ್ಲ. ಭೀಷ್ಮಾಚಾರ್ಯರು, ದ್ರೋಣಾಚಾರ್ಯರು— ಇವರ ಮಾತುಗಳನ್ನು ಕೇಳುವ ಹಾಗಿಲ್ಲ. ಹಾಗಿದ್ದರೂ ಆಪತ್ಕಾಲದಲ್ಲಿ ಇಲ್ಲದಂತಾಗಬಾರದೆಂದು ಅವರು ಆತನನ್ನು ತೊರೆಯಲಿಲ್ಲ.

ಕನ— ಹಾಗಾದರೆ ಅವರಿಗೆಲ್ಲ ಕೌರವನ ನಡತೆಯು ಸರಿಬೀಳುವುದಿಲ್ಲವೆ?

ವಿದು— ಸರಿಬೀಳುವುದೆಂದರೆ ಹೇಗೆ? ಅವರ ಮನಸ್ಸೆಲ್ಲ ಪಾಂಡವರಲ್ಲಿರುವುದು; ಬರಿಯ ಕಾಯ ಮಾತ್ರ ಕೌರವರಲ್ಲಿ.— (ಕೊಂಚ ಆಲೈಸಿ)- ಹೊರಗೇನೊ ಗಲಭೆ ಕೇಳಿಸುವಂತಿದೆ! ಆದೇನು ನೋಡು.

(ಕನಕಾಂಗಿಯು ಹೋಗಿ ಬರುವಳು)

ಕನ— ಶ್ರೀ ಕೃಷ್ಣನು ಆಗಲೆ ಬಂದುಬಿಟ್ಟನು.

ವಿದು— ಏನು ನಮ್ಮಲ್ಲಿ ಬಂದನೆ? ಎಲ್ಲಿ? ಪಾದಪ್ರಕ್ಷಾಲನಕ್ಕೆ ನೀರು ತೆಗೆದುಕೊಂಡು ಬಾ.

(ಕನಕಾಂಗಿಯು ತರುವಳು— ಕೃಷ್ಣನು ಪ್ರವೇಶಿಸುವನು— ವಿದುರನು ಸಾಷ್ಟಾಂಗವೆರಗುವನು).

ಕೃಷ್ಣ— ವಿದುರಾ! ಏಳು, ಎದ್ದೇಳು.

ವಿದು— ಸ್ವಾಮಿೂ ಪರಮಾತ್ಮಾ, ಬಡವರ ಮನೆಗೆ ಭಾಗೀರಥಿ ಬಂದಂತಾಯಿತು!

ಕೃಷ್ಣ— ನಿನ್ನಲ್ಲಿಗಲ್ಲದೆ ಮತ್ತಾರಲ್ಲಿಗೆ ಬರಲಿ? ನೀನೆ ನನ್ನ ಕೇವಲ ಭಕ್ತನಲ್ಲವೆ?

ವಿದು— ಸ್ವಾಮಿೂ, ಮಹಾನುಭಾವರುಗಳು ಅನೇಕರಿರುವಾಗ ಆರಲ್ಲಿಗೂ ಹೋಗದೆ ನನ್ನಲ್ಲಿಗೆನೆ ಬಂದುದು ಕೇವಲ ದಾಸನ ಮೇಲಣ ಅನುಗ್ರಹದಿಂದಲ್ಲವೆ?

ಕೃಷ್ಣ—ಅವರೆಲ್ಲರೂ ಈಗ ನನಗೆ ವಿರೋಧಿಗಳು.
ಕಾರ್ಯವು ಅಂತಹದು.

ವಿದು—ಸರ್ವವೂ ಬಲ್ಲವನು ಅವುದರಲ್ಲಿ ತಾನೆ ತಪ್ಪಿದವ್ಯಾ

ಕೃಷ್ಣ—ನಮ್ಮತ್ತೆಯು ಸುಖವಾಗಿದ್ದಾಳೇನು? ಇದುತನಕ
ಕಷ್ಟಪಟ್ಟಳು. ಇನ್ನು ಕೆಲವು ದಿನಗಳ ತನಕ ಸಹಿಸಿಕೊಳ್ಳಲಿ ಅ
ಮಕ್ಕಳಿಗೆ ಏನೊಂದು ಹಾನಿಯೂ ಬಾರದಂತೆ ನೋಡಿಕೊಳ್ಳುವ ಭ
ನನ್ನದು. ಈ ಮಾತುಗಳನ್ನಾಕೆಗೆ ತಿಳುಹಿಬಿಡು.

ವಿದು--ಪರಮಾತ್ಮನದೊಂದು ಅನುಗ್ರಹವಿದ್ದರೆ ಸಾಲದೆ?
ನಾನು ಧನ್ಯನೆ ಸರಿ. ಹಲವು ವರ್ಷಗಳು ತಪಸ್ಸುಮಾಡಿದರೂ
ನಿನ್ನೊಂದು ದರ್ಶನವು ಕೇವಲ ದುರ್ಲಭ! ಹೀಗಿರುವಾಗ ನನ್ನ
ಕ್ಕೇನು ಕಡಿಮೆ?

ಕೃಷ್ಣ—ಇದೇನು, ವಿದುರಾ? ಕೇವಲ ಬಾಯುಪಚಾರಗ
ತೀರಿತಲ್ಲ? ಅತಿಥ್ಯವನ್ನು ಪ್ರಾರ್ಥಿಸಬೇಡವೆ?

ವಿದು—ಸರ್ವಸ್ವತಂತ್ರನಾದ ನಿನಗೆ ನಾನೇನು ಸತ್ಕಾರವ
ನನ್ನ ಸ್ಥಿತಿಯು ನಿನಗೆ ತಿಳಿದಿರುವುದು.

ಕೃಷ್ಣ—ಬಹಳ ದೂರದಿಂದ ಬಂದಿದ್ದೇನೆ. ಏನಾದರೂ
ಹಾರಕ್ಕಿದ್ದರೆ ಕೊಡಬಾರದೆ?

ವಿದು—ಸ್ವಾಮಿ, ನಾನೇನು ಕೊಡಲಿ? ಏನೆ? ಒಳಗೇನಿದೆ?

ಕನ—ರವಷ್ಟು ಹಾಲಿರಬೇಕು.

ವಿದು—ಅದನ್ನಾದರೂ—ಚಿಂತಿಲ್ಲ-ತಂದುಕೊಡು, ನೋಡೋ

(ತಂದು ವಿದುರನ ಕೈಗೆ ಕೊಡುವಳು).

ವಿದು—ಕೃಷ್ಣಾ, ನನ್ನ ಅವಸ್ಥೆಯು ನಿನಗೆ ತಿಳಿದಿರುವುದು.
ಲ್ಲಿರುವುದು ಇಷ್ಟೆ ಸರಿ.

ಕೃಷ್ಣ—ಮನಃಪೂರ್ವಕವಾಗಿ ಕೊಡುವುದು ಒಂದೆಳ್ಳಿನಷ್ಟಾದ
ಪರ್ವತಪ್ರಮಾಣವಾಗುವುದಲ್ಲವೆ?

ವಿದು—ಇಂತಹ ಅಲ್ಪವಾದುದನ್ನು ಹೇಗೆ ತಾನೆ ಕೊಡಲಿ?

ಕೃಷ್ಣ—ಚಿಂತಿಲ್ಲ. ಕೊಡು. (ಕುಡಿಯುವನು). ಇದೊ ನನಗೆ ಕು, ಇನ್ನೂ ಕೊಂಚ ಉಳಿದಿದೆ. ನೀವು ಉಪಯೋಗಿಸಿಕೊಳ್ಳಿರಿ.

ವಿದು—ನಿನ್ನ ಮಹಿಮೆಯನ್ನು ಏನೆಂದು ಹೇಳಲಿ? ನಾವು ಕೊಟ್ಟದ್ದು ದು ಕುಡಿತೆಯಷ್ಟು ಕೂಡ ಇರಲಿಲ್ಲ. ಬ್ರಹ್ಮಾಂಡವನ್ನೆ ಧರಿಸಿ ಳ್ಳತಕ್ಕ ನಿನ್ನ ಹೊಟ್ಟೆಯೊಳಗೆ ಇಷ್ಟು ಹಾಲು ಕೂಡ ಹಿಡಿಯಲಾರದೆ ೋಯಿತು!

ಕೃಷ್ಣ—ಅದಿರಲಿ, ಈಗ ಕೌರವನಲ್ಲಿಗೆ ಹೋಗಬೇಕು.

ವಿದು—ದಾಸನು ಆವುದಕ್ಕೂ ಸಿದ್ಧನಾಗಿದ್ದಾನೆ.

ಕೃಷ್ಣ—ನಾನು ಬರುವುದಿಲ್ಲ. ನೀನು ಹೋಗಿ ಆತನ ಸಮಯ ನ್ನು ತಿಳಿದುಕೊಂಡು ಬಾ.

ವಿದು—ಆಜ್ಞೆ, ಈಗಲೆ ಬಂದೆ.

[ಹೋಗುವನು.]

ಮೂರನೆಯ ಪ್ರವೇಶ.

(ಸ್ಥಳ:—ಅರಮನೆಯ ಹೆಬ್ಬಾಗಿಲು. ಕೌರವ, ಕರ್ಣ, ಅಶ್ವತ್ಥಾಮ, ದುಶ್ಶಾಸನ, ಕುನಿ—ಮಾತನಾಡುತ್ತ ಪ್ರವೇಶಿಸುವರು.)

ಸುಯೋಧನ—ಕುಲಕ್ಕೆ ತಕ್ಕ ಆಚಾರ, ಆಚಾರಕ್ಕೆ ತಕ್ಕ ಬುದ್ಧಿ!

ಕರ್ಣ—ಕುಲವಾವುದು?

ಅಶ್ವ—ಗೋವಳರ ಕುಲ.

ದುಶ್ಯಾ— ಆಚಾರವಾವುದು?

ಕರ್ಣ— ಚೋರ ಶಿಖಾಮಣಿ!

ಅಶ್ವ— ಬುದ್ಧಿ ಯಾವುದು?

ದುಶ್ಯಾ— ಕುಟಿಲ ಬುದ್ಧಿ!

ಶಕುನಿ— ಹುಟ್ಟುಗುಣ ಗಟ್ಟ ಹತ್ತಿದರೂ ಬಿಡದು.

ದುಶ್ಯಾ— ಮಾವಯ್ಯನ ಮಾತು ಚೆನ್ನಾಗಿ ಒಪ್ಪುತ್ತಿದೆ.

ಕರ್ಣ— ಕರಿಯ ನಾಯಿ ಎಂದಾದರೂ ಬಿಳಿದಾಗುವುದಕ್ಕಿದೆಯೆ?

ಸುಯೋ— ಸರಿ, ಸರಿ! ಆ ಮೂರ್ಖನು ವಿದುರನಲ್ಲಿಗೇಕೆ ಹೋ
ಬೇಕು?

ಅಶ್ವ— ನಮ್ಮಲ್ಲಿಗೆ ಬಂದಾನೆಂದು ನಿಶ್ಚಯಮಾಡಿಕೊಂಡಿದ್ದೆವು.

ದುಶ್ಯಾ— ನಾವು ಏನೆಲ್ಲ ಏರ್ಪಾಡು ಮಾಡಿದ್ದೆವು!

ಸುಯೋ— ಚಿಂತಿಲ್ಲ: ನಾವಂತೂ ಕೇವಲ ವೈರಿಗಳು; ಕರ್ಣನಲ್ಲಿ
ಹೋಗಬಾರದಿತ್ತೆ?

ದುಶ್ಯಾ— ಕರ್ಣನು ಕೌರವರ ಮಿತ್ರನು.

ಸುಯೋ— ಮಾವಯ್ಯನಲ್ಲಿಗೆ ಹೋಗಬಾರದಿತ್ತೆ?

ಶಕುನಿ— ನನ್ನಲ್ಲಿಗೆ ಆತನಿಗೆ ಇಷ್ಟವಿಲ್ಲ.

ಸುಯೋ— ದ್ರೋಣಾಚಾರ್ಯರು ಗುರುಗಳಷ್ಟೆ! ಉಭಯ ಪಕ್ಷ
ದವರಿಗೂ ಸಮಾನ. ಅವರಲ್ಲಿ ಉಳುಕೊಳ್ಳಬಹುದಿತ್ತು.

ಕರ್ಣ— ಅದು ನ್ಯಾಯ.

ಸುಯೋ— ಭೀಷ್ಮಾಚಾರ್ಯರಲ್ಲಿ ಇಳಿಯುವುದಕ್ಕೇನು ಆಕ್ಷೇಪಣೆ

ಶಕುನಿ— ನಾನು ಹೇಳಲಿಲ್ಲವೆ? ಅವರವರ ಯೋಗ್ಯತೆಗೆ ಸ
ಯಾಗಿ ಅವರವರು ನಡೆಯುತ್ತಾರೆ.

ಸುಯೋ—ಅವನು ಗೋವಳ, ಇವನು ಶೂದ್ರ!

ದುಶ್ಶಾ—ಒಬ್ಬನು ದನಕಾಯುವವನು. ಇನ್ನೊಬ್ಬನು ಉಳು
ವನು—ಇಬ್ಬರಿಗೂ ಗಂಟು!

ಕರ್ಣ—ಅದೋ ವಿದುರನು ಬರುತ್ತಾನೆ. ಏನೊ ವಿಶೇಷವಿರ
ಕು.

ವಿದುರ—(ಪ್ರವೇಶಿಸಿ) ಕೌರವೇಶ್ವರನು ಜಯಶೀಲನಾಗಲಿ!

ಸುಯೋ—ಏನು ಚಿತ್ತೈಸಿಬಿಟ್ಟಿತು! ಗೋವಳನಿಲ್ಲಿಲ್ಲವಲ್ಲ?

ವಿದುರ—ರಾಜನೆ! ಇಂತಹ ಮಾತುಗಳು ನಿನ್ನ ಬಾಯಿಂದ
ಹೊರಡತಕ್ಕವುಗಳಲ್ಲ.

ಸುಯೋ—ಶೂದ್ರನ ನೀತಿ ಗೋವಳನಿಗಾದೀತು.

ವಿದು—ಶ್ರೀ ಕೃಷ್ಣನ ಮಹಿಮೆಯು ನಿನಗೆ ಚೆನ್ನಾಗಿ ತಿಳಿದಿರು
ದು. ಆದರೂ ಇಂತಹ ಮಾತುಗಳನ್ನಾಡುತ್ತಿರುವೆ!

ಸುಯೋ—ಓಹೊ! ಚೆನ್ನಾಗಿ ಬಲ್ಲೆ. ಚೌರ್ಯಧುರಂಧರ!
ಹೆಸರಿನ ಗಡಿಗೆಗಳೆ ಮಾಯವಾಗುತ್ತಿವೆಯಂತೆ.

ವಿದು—"ಸಂಸರ್ಗಜಾ ದೋಷಗುಣಾ ಭವಂತಿ"—ನೀಚರ ಸಹ
ವಾಸ ಬೇಡ; ಕೊಂಚ ಯೋಚಿಸಿನೋಡು.

ಶಕುನಿ—ಎಲ್ಲರೂ ನೀಚರು, ನೀನು ಮಾತ್ರ ಸುಭಗ!

ವಿದು—ಕೃಷ್ಣನನ್ನು ನಿಂದಿಸುವುದು ಯುಕ್ತವಲ್ಲ.

ಸುಯೋ—ಸಾಕು, ಸಾಕು! ನೀನು ಬಂದ ಕಾರ್ಯವೇನು?

ವಿದು—ಶ್ರೀ ಕೃಷ್ಣನು ನಿನ್ನನ್ನು ನೋಡುವುದಕ್ಕೆ ಎಂದು ಬರ
ಬೇಕೆಂದು ಕೇಳುತ್ತಾನೆ.

ಸುಯೋ—ನಾಳೆಯ ದಿನ ಬರಲಿ.

ವಿದು—ಒಳ್ಳೆಯದು, ಹಾಗೆಯೆ ಆಗಲಿ. (ಹೋಗುವನು)

ಶಕುನಿ— ಪಾಟಾಳಿಗೊಂದು ಮೋಟಾಳು— ಮೋಟಾಳಿಗೊಂದು ಮೋಟು ಕುದುರೆ! ಧರ್ಮರಾಯನಿಗೊಬ್ಬ ಮಿತ್ರ. ಆ ಮಿತ್ರನಿಗೊ ಬಂಟ!

ದುಶ್ಶಾ— ಆ ಕಳ್ಳನಿಗಾದರೂ ಬುದ್ಧಿ ಕಲಿಸದಿರಬಾರದು.

ಸುಯೋ— ನಾಳೆ ಸಭೆಗೆ ಬರಲಿ, ಮುಖ ಕೆಳಗಿಳಿಸಿಬಿಡಬೇಕು.

ಶಕುನಿ— ಹಾಗೆಯೆ ಸರಿ.

ಕರ್ಣ— ಆದರೆ ಸಭೆಗೆ ಬಂದವನನ್ನು ಮಾನಭಂಗಮಾಡಬಾರದಷ್ಟೆ

ಶಕುನಿ— ಅದು ಧರ್ಮ, ಆದರೆ ಗೋವಳರಿಗೆ ಧರ್ಮವೆ ಬೇರೆ!

ಅಶ್ವ— ಗುರುಹಿರಿಯರಿದಿರಿಗೆ ಹೇಗಾದೀತು?

ಸುಯೋ— ಅವರನ್ನಾರು ಕೇಳುತ್ತಾರೆ?

ಶಕುನಿ— ಇದುತನಕ ಕೇಳಿದ್ದರಲ್ಲವೆ ಇನ್ನು ಮುಂದೆ ಕೇಳುವರು!

ಸುಯೋ— ಇರಲಿ. ನಾಳೆ ನೋಡೋಣ. (ಎಲ್ಲರೂ ಹೋಗುವರು.)

ನಾಲ್ಕನೆಯ ಪ್ರವೇಶ.

(ಸ್ಥಳ:— ಕೌರವನ ಆಸ್ಥಾನ. ಕೌರವ, ಧೃತರಾಷ್ಟ್ರ, ಭೀಷ್ಮ, ದ್ರೋಣ, ಕೃಪ, ಸಂಜಯ, ಕರ್ಣ, ಶಕುನಿ, ದುಶ್ಶಾಸನ, ಅಶ್ವತ್ಥಾಮ – ಕುಳಿತಿರುವರು.)

ಸುಯೋ— ಗುರುಹಿರಿಯರೊಡನೆ ನನ್ನದೊಂದು ವಿಜ್ಞಾಪನೆಯಿರುವುದು. ಪಾಂಡವರು ಸಂಧಿಗೋಸ್ಕರ ಕೃಷ್ಣನನ್ನು ಕಳುಹಿಸಿರುವರಷ್ಟೆ! ಈಗ ಸಂಧಿಯೊ ಸಂಗ್ರಾಮವೊ ಎಂಬುದರ ವಿಷಯ ತಮ್ಮೆಲ್ಲರ ಅಭಿಪ್ರಾಯ ತಿಳಿಸಿದರಾಗುತಿತ್ತು.

ಭೀಷ್ಮ— ನಮ್ಮ ಅಭಿಪ್ರಾಯಗಳನ್ನು ನಾವು ಮೊದಲೆ ಹೇಳಿರುತ್ತೇವೆಯಷ್ಟೆ!

ಸುಯೋ—ಹಾಗಾದರೆ ಸಂಧಿಯಾಗಬೇಕೆನ್ನುವಿರಲ್ಲವೆ?

ಭೀಷ್ಮ—ಪಾಂಡವರಿಗೆ ಕೃಷ್ಣನು ಬೆಂಬಲನಾಗಿದ್ದಾನೆ. ಆದು ರಿಂದ ಸಂಗ್ರಾಮದಲ್ಲಿ ನಮಗೆ ಜಯವಾದೀತೆಂಬುದನ್ನು ಸ್ವಪ್ನದಲ್ಲಿ ಊಡ ಎಣಿಸುವುದಕ್ಕೆ ಅವಕಾಶವಿಲ್ಲ.

ಕರ್ಣ—ಕೃಷ್ಣನಿದ್ದರೇನಾಯಿತು? ಆತನೊಡನೆ ಯುದ್ಧಮಾಡುವ ಮರ್ಥರು ನಮ್ಮಲ್ಲಿರಲಾರರೆ?

ಶಕುನಿ—ಸರಿ ಹೇಳಿದೆ ಕರ್ಣಾ!

ದ್ರೋಣ—ಕೃಷ್ಣನು ಆರೆಂಬುದನ್ನು ಕೊಂಚ ಜ್ಞಾಪಿಸಿಕೊಳ್ಳ ಾರದೆ?

ಸುಯೋ—ಆದರೆ ಆತನು ಯುದ್ಧಮಾಡಕೂಡದಷ್ಟೆ?

ದ್ರೋಣ—ಮೂರು ಲೋಕಗಳೂ ಆತನ ಇಚ್ಛಾಮಾತ್ರದಲ್ಲಿವೆ. ಂತಹ ಮಹಾತ್ಮನೂ ಯುದ್ಧಮಾಡಬೇಕೆ?

ಕರ್ಣ—ಮಾಗಧನಿದಿರಿಗೆ ಆ ಮಾಹಾತ್ಮ್ಯವು ಎಲ್ಲಿ ಅಡಗಿ ೂಂಡಿತ್ತು?

ದ್ರೋಣ—ಅದನ್ನು ನಿನ್ನಂತಹರು ತಿಳಿದುಕೊಳ್ಳಲಾರರು. ಆತನಿ ಂತಲೂ ನೀನೆ ಶೂರನೆಂದೆಣಿಸೋಣ—ಕೃಷ್ಣನಾದರೊ ಬಾಲ್ಯದಲ್ಲಿಯೆ ಷ್ಟೊ ಮಂದಿ ದೈತ್ಯರನ್ನು ಸಂಹಾರಮಾಡಿದನು. ನೀನಿದುವರೆಗೆ ಎಷ್ಟು ಂದಿ ದೈತ್ಯರನ್ನು ಕೊಂದಿರುವೆ? ಬೆರಳು ಮಡಿಸು ನೋಡೋಣ!

ಕರ್ಣ—ಅದು ಅವರವರ ಕರ್ಮಾನುಸಾರ—ಶಾಪನಿಮಿತ್ತದಿಂದ ಾಗಾಯಿತು.

ದ್ರೋಣ—ಮೊನ್ನೆ ಗೋಗ್ರಹಣದಲ್ಲಿ ಅರ್ಜುನನ ಮೋಹನಾ ್ಕೆ ಮೋಹಿಸಿಹೋದುದು ಕೂಡ ಶಾಪನಿಮಿತ್ತವಲ್ಲವೆ?

ಸುಯೋ—ಆಚಾರ್ಯರೆ, ನಾವು ಪ್ರಕೃತ ಕಾರ್ಯವನ್ನು ಯೋಚಿ ದರಾಗಬಹುದಲ್ಲವೆ?

ಭೀಷ್ಮ—ಸುಯೋಧನ, ನಿನ್ನಲ್ಲಿ ಸಮರ್ಥರಿದ್ದಾರೆಂದು ಭಾ
ಬೇಡ. ಕೃಷ್ಣನಿದಿರಿಗೆ ಆರ ಸಾಹಸವೂ ನಡೆಯಲಾರದು.

ಸುಯೋ—ಏನು ಕೃಪಾಚಾರ್ಯರೆ!

ಕೃಪ—ಭೀಷ್ಮಾಚಾರ್ಯರು ಹೇಳಿದ ಮಾತು ಸಹಜವೇ. ಸ
ಸಂಧಿಯೆ ಸರ್ವೋತ್ಕೃಷ್ಟ!

ಶಕುನಿ—ಕ್ಷತ್ರಿಯರು ತಮ್ಮ ಪೌರುಷವನ್ನೆಂದೂ ಬಿಡಕೂಡದ
ವನವಾಸದಲ್ಲಿದ್ದ ಆ ಕಾಡುಮನುಷ್ಯರೊಂದಿಗೆ ನಮ್ಮಂತಹ ಕ್ಷತ್ರಿಯರಿ
ಸಂಧಿಯೇ? ಯುದ್ಧಮಾಡುವ ಸಾಹಸವು ಅವರಲ್ಲಿರುತ್ತಿದ್ದರೆ ಸಂಧಿಯ
ಮಾತನ್ನೇಕೆ ಎತ್ತುತ್ತಿದ್ದರು? ಕ್ಷತ್ರಿಯರ ಸಂಘವನ್ನು ಮರೆಸಬಾರದಾಗಿತ್ತೆ?

ಕೃಪ—ನಮ್ಮಲ್ಲಿ ಅಂತಹ ಶೂರರು ಆರಿರುವರು?

ಶಕುನಿ—ಸರಿ, ಸರಿ. ಕರ್ಣನಿಲ್ಲವೆ? ಅಶ್ವತ್ಥಾಮನು ಸಾಕ್ಷಾತ್
ಈಶ್ವರಾವತಾರ. ಭೀಷ್ಮಾಚಾರ್ಯರು ವೃದ್ಧರಾದರೂ ಅವರ ಸಾಮ
ರ್ಥ್ಯವು ಯೌವನದಲ್ಲಿಯೆ ಇರುವುದು. ದ್ರೋಣಾಚಾರ್ಯರೂ ನಿಮ್ಮ
ಎಲ್ಲರಿಗೂ ಗುರುಗಳು, ನಿಮ್ಮಿಂದಾಗುವ ಸಾಹಸ ನಾನು ಮಾಡುವುದಿಲ್ಲವೆ

ದುಶ್ಶಾ—ಮಾವಯ್ಯ, ಅವರೆಲ್ಲರಿಗೂ ಸಂಧಿಯೆ ಇಷ್ಟ. ಹೇ
ತಾನೆ ಮನಃಪೂರ್ವಕವಾಗಿ ಯುದ್ಧ ಮಾಡಿಯಾರು?

ಶಕುನಿ—ಬೇಡ; ನಾವೆಲ್ಲರಿದ್ದೇವಲ್ಲ!

ಕೃಪ—ನಿಮ್ಮೆಲ್ಲರನ್ನು ಮೊನ್ನೆಯೆ ಪರೀಕ್ಷೆಮಾಡಿಯಾಗಿದೆ. ಅರ್ಜು
ನನೊಬ್ಬನೊಡನೆಯೆ ಕಾದುವುದಕ್ಕೆ ನಿಮ್ಮಿಂದಾಗಲಿಲ್ಲ.

ಸುಯೋ—ಕೃಪಾಚಾರ್ಯರೆ, ಜಯಾಪಜಯಗಳು ಪರಮಾತ್ಮ
ಬಲ್ಲ. ಆದರೆ, ಕ್ಷಾತ್ರಧರ್ಮಕ್ಕನುಸಾರವಾಗಿ ನಡೆಯಬೇಕಲ್ಲವೆ?

ಕೃಪ—ಸುಯೋಧನ, ನೀನಿವರನ್ನು ನಂಬಿಕೊಂಡಿರಬೇಡ. ಇವ
ಮಾತುಗಳು ಈಗ ಅಮೃತದಂತಿದ್ದರೂ ಮುಂದಕ್ಕೆ ವಿಷವಾಗಿ ಪರಿ
ಣಮಿಸಿಯಾವು!

ಸಂಜಯು—ರಾಜನೆ, ಸಂಧಿಯೆ ಉತ್ತಮಪಕ್ಷವು. ಪಾಂಡವರಿಗೆ ವನಬಲವು ಚೆನ್ನಾಗಿರುವುದು. ಆದುದರಿಂದ ನಮಗೆಂದಿಗೂ ಜಯ ಕ್ಕಲಾರದು.

ಅಶ್ವ—ದೈವಬಲ ಅವರಿಗೆ ಮಾತ್ರವೆಂದರೇನು? ನಮಗೂ ಏಕ ರಬಾರದು?

ದ್ರೋಣ—ಅಶ್ವತ್ಥಾ, ಕೊಂಚ ಯೋಚಿಸಿ ಮಾತನಾಡಬಾರದೆ?

ಅಶ್ವ—ಪಿತನೆ, ಕ್ಷಮಿಸು! ತಿಳಿಯದೆ ಹೇಳಿದೆನು.

ಕರ್ಣ—ರಾಜನೆ, ದೈವಬಲವು ಅವರಿಗೆಷ್ಟು ಬೇಕಾದರೂ ಇರಲಿ; ನಮಗೆ ಸಂಗ್ರಾಮವೆ ಸರಿ. ಆ ಭಿಕ್ಷುಕರೊಡನೆ ಎಷ್ಟು ಮಾತ್ರಕ್ಕೂ ಸಂಧಿಯಾಗಕೂಡದು!

ಸುಯೋ—ಶಹಭಾಸ್! ಕರ್ಣ! ಹಾಗೆಯೆ ಸರಿ!

ಶಕುನಿ—ಚೆನ್ನಾಗಿ ಹೇಳಿದೆ. ಆ ಪಾಂಡವರಿಗೆ ವನವಾಸವೆ ಗತಿ!

ಧೃತ—ಮಗನೆ, ಈ ಕುಬುದ್ಧಿಗಳ ಮಾತುಗಳಲ್ಲಿ ವಿಶ್ವಾಸವಿಟ್ಟು ವ್ಯರ್ಥವಾಗಿ ಕೆಟ್ಟು ಹೋಗಬೇಡ.

ಸುಯೋ—ಪಿತನೆ, ನಿಮ್ಮನ್ನು ಮಾತನಾಡಿಸಿದವರಾರು? ಸುಮ್ಮನೆ ಕುಳಿತುಕೊಂಡಿರಬಾರದೆ?

ಧೃತ—ಹಾ ಹಾ! ವಿಧಿಯೆ! ನನ್ನಂತಹ ಪಾಪಿಯು ಎಲ್ಲಿಯಾದರೂ ಇರುವನೆ? ನೂರು ಮಂದಿ ಮಕ್ಕಳು! ಏನು ಪ್ರಯೋಜನ? ಭರತಾನ್ವಯಕ್ಕೆ ಕಲಂಕವನ್ನೆ ತರುವಂತಹರು! ಗುರುಹಿರಿಯರ ಮಾತುಗಳನ್ನು ಕೇಳುವವರಲ್ಲ! ಒಂದಕ್ಕೆ ಹತ್ತು ಉತ್ತರ ಕೊಡುತ್ತಾರೆ! ಲೋಕದಲ್ಲಿ ಮಗನು ತಂದೆಯೊಡನೆ ಮಾತನಾಡುವುದು ಈ ವಿಧವಾಗಿಯೆ ಇರುವುದೆ? ಹಾ ಹಾ! ನನಗಿನ್ನೂ ಅವಸಾನ ಬಾರದಲ್ಲ! ಇವರ ದುಷ್ಕೃತ್ಯಗಳನ್ನು ನೋಡಲಾರೆ!

ಸುಯೋ—ಕರ್ಣ, ನಮಗಂತೂ ಸಂಗ್ರಾಮವೇ ಸರಿ! ಇ
ಇಷ್ಟು ಪಡುವುದಿಲ್ಲವೊ ಅವರೆಲ್ಲರೂ ಧರ್ಮರಾಜನ ಮರೆಹೊಕ್ಕು ಬಾಳಲಿ

ಕಂಚುಕಿ—(ಪ್ರವೇಶಿಸಿ) ರಾಜನೆ, ವಿಜಯಿಯಾಗು! ಶ್ರೀ ಕೃಷ್ಣ
ದಯೆಮಾಡಿಸುತ್ತಿರುವನು!

(ವಿದುರನೊಡನೆ ಕೃಷ್ಣನು ಪ್ರವೇಶಿಸುವನು. ಕೌರವ ವಿನಾ ಎಲ್ಲರೂ ಏಳುವರು

ಕೃಷ್ಣ—(ಸ್ವಗತ) ಆಹಾ! ಈ ಮದಾಂಧನು ನನ್ನನ್ನು ಅವಮಾ
ಗೊಳಿಸಬೇಕೆಂದಿರುವನು. ಗುರುಜನಗಳು ಎದ್ದು ನಿಂತರೂ ತಾನೊ
ಬ್ಬನೆ ಮಾತ್ರ ಅಹಂಭಾವದಿಂದ ಕುಳಿತಿರುವನು! ಇರಲಿ, ತಾನಾಗಿಯೆ ನ
ಕಾಲಬಳಿ ಬೀಳುವಂತೆ ಮಾಡುತ್ತೇನೆ.

(ಭೂಮಿಯನ್ನು ಉಂಗುಟದಿಂದ ಒತ್ತುತ್ತಲೆ ಕೌರವನು ಮುಕ್ಕುರಿಸಿಕೊಂಡು
ಬೀಳುವನು.)

ಕೃಷ್ಣ—ಸುಯೋಧನ, ಏನಿದು? ಗೋವಳನು ಇಷ್ಟರ ಮಟ್ಟಿ
ಮರ್ಯಾದೆಗೂ ಅರ್ಹನೆ? ಏತಕ್ಕಾಗಿ ಇಲ್ಲಿತನಕ ಬಂದುಬಿಟ್ಟೆ? ನಾ
ಅಲ್ಲಿಗೆ ಬರುತ್ತಿದ್ದೆನಲ್ಲ? ಅದೂ ಅಲ್ಲದೆ ಬಾವನೆಂಟರೊಳಗೆ ನಮಗೆ ಇಂತ
ಮರ್ಯಾದೆಯೂ ಬೇಕಾಗಿದೆಯೆ?

(ಕೌರವನು ತಲೆಬಾಗಿ ಮೌನದಿಂದಿರುವನು.)

ಭೀಷ್ಮ—ಎಲೈ ಮಾಧವ! ನಿನ್ನ ಚರಣಕಮಲಗಳ ದರುಶನದಿಂ
ನಾವೆಲ್ಲರೂ ಪವಿತ್ರರಾದೆವು. ನಮ್ಮ ಪಾಪಕೋಟಿಗಳೆಲ್ಲವೂ ಇಂದಿಗೆ
ನಾಶವಾದಂತಾಯಿತು. ಈ ಪೀಠವನ್ನಲಂಕರಿಸೋಣವಾಗಲಿ.

ಕೃಷ್ಣ—ಕುರುಕುಲಾಗ್ರಣಿಯೆ, ಇದೇನು ಮೌನವಾಗಿರುವೆ?
ಮಾತನಾಡಬಾರದೆ?

ಸುಯೋ—ನಾನೇನು ಮಾತನಾಡಲಿ? ಹಸ್ತಿನಾವತಿಗೆ ಬಂದ
ವನು ನಮ್ಮಲ್ಲಿಗೇಕೆ ಬಾರದೆ ಹೋದೆ? ಬೇಕಾದ ಏರ್ಪಾಡು ಮಾಡಿ
ಸಿದ್ದೆನಲ್ಲ?

ಕೃಷ್ಣ—ಇದಕ್ಕಾಗಿ ಮನಸ್ತಾಪ ಪಡಬೇಡ. ಇದೊಂದು ಘನ
ವಾದ ಕಾರ್ಯವಲ್ಲ.

ಸುಯೋ—ಚಿಂತಿಲ್ಲ, ನಾವು ಪಾಂಡವರ ಶತ್ರುವೆಂದೆ ಇರಲಿ. ...ಮ್ಮಲ್ಲಿಗೆ ಬರಬಾರದು. ಭೀಷ್ಮಾಚಾರ್ಯರು, ದ್ರೋಣಾಚಾರ್ಯರು, ಕೃಪಾ...ರ್ಯರು ಮೊದಲಾದವರಿರಲಿಲ್ಲವೆ? ಅವರಲ್ಲಿಯಾದರೂ ಉಳಿದುಕೊಳ್ಳ...ರದಿತ್ತೆ?

ಕೃಷ್ಣ—ಎಲ್ಲಿಯಾದರೇನು? ವಿದುರನೂ ನಮಗೆ ತುಂಬ ಬೇಕಾ...ನು.

ಸುಯೋ—ಗೋವಳಿಗತನವು ಚೆನ್ನಾಗಿ ಕಂಡುಬರುತ್ತಿದೆ. ನೀಚ...ುದ ದಾಸೀಪುತ್ರನಾದ ವಿದುರನ ಮನೆಯಲ್ಲಿ ಭೋಜನವಾಡಿದೆ! ...ಷ್ಟಂದರೂ ನಂದಗೋಪನ ಸಾಕಣೆ ಮಗನಲ್ಲವೆ? ಏತಕ್ಕಾಗಿ ರಾಜನೀತಿ ...ಳುವುದಕ್ಕೆ ವಹಿಸಿಕೊಂಡೆಯೊ, ಕಾಣೆ!

ಕೃಷ್ಣ—ಹಾಗೆಯೆ ಕೇಳು. ಒಂದೇ ಪ್ರಿಯರಾದವರಲ್ಲಿ ಭೋಜನ ...ಾಡಬೇಕು. ಇಲ್ಲವೆ ಜ್ಞಾನಿಗಳೊಡನೆ ಭೋಜನಮಾಡಬೇಕು. ನೀನು ...ನಗೆ ಪ್ರಿಯನಂತೂ ಅಲ್ಲ! ಜ್ಞಾನಿಗಳು ನಿನ್ನಲ್ಲಿ ಮೊದಲೆ ಇಲ್ಲ! ಮತ್ತೆ ...ಗೆ ತಾನೆ ನಾನು ನಿನ್ನಲ್ಲಿಗೆ ಬರಲಿ?

ಸುಯೋ—'ಸಮಾನ ಶೀಲ ವ್ಯಸನೇಷು ಸಖ್ಯಂ'—ಎಂದಿರು...ು. ಗೋವಳನಿಗೂ ದಾಸೀಪುತ್ರನಿಗೂ ಬಹಳ ಮಿತ್ರತ್ವವಲ್ಲವೆ?

ವಿದು—ಎಲಾ ದುರ್ಯೋಧನ! ಐಶ್ವರ್ಯವಿದೆಯೆಂಬ ದುರಹಂಕಾರ...ದ ಪೂರ್ವಾಪರ ವಿಚಾರವಿಲ್ಲದೆ ಬಾಯಿಗೆ ಬಂದಂತೆ ಒದರುವೆಯಲ್ಲವೆ? ...ೊ, ನೋಡು—ಭೀಮನು ನಿನ್ನನ್ನು ಮುರಿದು ಕೆಡಹುವಾಗ ನಿನ್ನ ...ಣರಕ್ಷಣೆಯ ಸಲುವಾಗಿ ಇದೊಂದು ಧನುಸ್ಸನ್ನು ಇದುವರೆಗೂ ...ೇಪಾಸನ ಮಾಡಿಕೊಂಡಿದ್ದೆನು. ಇದೊ, ನಿನ್ನಿದಿರಿಗೆನೆ ಅದನ್ನು ...ರಿದುಬಿಡುತ್ತೇನೆ. ಇನ್ನು ಮುಂದೆ ನಿನಗಾಗಿ ನಾನು ಶರಸನ್ಯಾಸ...ನ್ನು ಬಿಟ್ಟುಬಿಟ್ಟರೆ ನಾನು ವಿದುರನೆ ಅಲ್ಲ!

ಕೃಷ್ಣ—ಕೌರವ! ಶತ್ರುಗಳನ್ನು ಮನೆಯಲ್ಲಿಟ್ಟುಕೊಂಡಿರಬಾರದು; ...ರುಗಳೊಡನೆ ಊಟ ಮಾಡಬಾರದು. ಇದು ರಾಜನೀತಿ! ನೀನು ...ವ್ಯದರೂ ಪಾಂಡವರಿಗೆ ವೈರಿಯಾದ ಮೇಲೆ ನನಗೂ ವೈರಿಯಾದೆ. ...ಲ್ಲಿ ನಾನು ಹೇಗೆ ಊಟಮಾಡಲಿ?

ಸುಯೋ—ಅದು ಹಾಗಿರಲಿ. ಈಗ ನೀನು ಬಂದಿರುವ ಕಾ
ವನ್ನು ಹೇಳಬಾರದೆ?

ಕೃಷ್ಣ—ಹಾಗಾದರೆ ಕೇಳು. ಪಾಂಡವರ ಅಜ್ಞಾತವ
ಅವಧಿಯು ನಡೆದುಹೋಯಿತು. ಇನ್ನು ನೀನು ಅವರನ್ನು
ಕೊಂಡು ಸುಖವಾಗಿರುವುದು ಅತ್ಯುತ್ತಮವಾದ ಕಾರ್ಯ. ಅ
ಅರ್ಧರಾಜ್ಯವನ್ನು ಕೊಟ್ಟುಬಿಡು. ಈ ಭೂಮಿಗೋಸ್ಕರ ಆಸೆ ಪಡ
ಇದು ಕೇವಲ ಅಸ್ಥಿರವಾದುದು. ಅದರಲ್ಲಿಯೂ ಐಶ್ವರ್ಯವು ಹೆ
ಹಾಗೆಲ್ಲ ದೃಷ್ಟಿಯು ಮಂದವಾಗುತ್ತ ಬರುತ್ತಿದೆ. ಇದು ಈಗಿನ
ಸರ ಲಕ್ಷಣ. ಸ್ವಾಮಿ, ಅಮಾತ್ಯ, ಸುಹೃತ್, ಕೋಶ, ರಾಷ್ಟ್ರ,
ದುರ್ಗ—ಇವೇ ಸಪ್ತಾಂಗಗಳು. ಇವುಗಳಲ್ಲಿ ನಿನಗೇನೂ ಕೊರತೆಯಿ
ಅದರಲ್ಲಿಯೂ ಪಾಂಡವರ ಸ್ನೇಹವನ್ನು ಸಂಪಾದಿಸಿಕೊಂಡು ಬ
ನಿನ್ನಂತಹ ಅರಸರೆ ಲೋಕದಲ್ಲಿಲ್ಲವೆಂದಾಗುತ್ತಿದೆ. ಅವಾತನಲ್ಲಿ ಸಪ್ತಾ
ಗಳು ಸರಿಯಾಗಿಲ್ಲವೋ ಅಂತಹ ಅರಸನ ಬಾಳುವೆ ಸ್ಥಿರವಲ್ಲ.
ನಿನ್ನ ಗುರುಹಿರಿಯರು ನಿನಗೆ ಹೇಳುವುದಕ್ಕೆ ಅಂಜುವರು. ಒಂದು
ಅವರು ಹೇಳಿದರೂ ನೀನು ಕೇಳುವಂತಹನಲ್ಲ! ಇನ್ನು ಚತುರುಪಾ
ಗಳಲ್ಲಿ ಸಾಮವೆಂಬುದು ರಾಜನೀತಿಯ ಬೀಜಮಂತ್ರ. ಸಾಮ
ದರೆ ನೀತಿ ತಪ್ಪಿದಂತೆಯೆ ಸರಿ. ದಂಡೋಪಾಯವು ಕೇವಲ ಅಪಾ
ಕರ. ಆದುದರಿಂದ ಅರಸನಾದವನು ದಂಡೋಪಾಯವನ್ನು, ಸಾ
ವಾದ ಮಟ್ಟಿಗೂ ವರ್ಜಿಸಬೇಕು. ನೀನೇನೊ ಪಾಂಡವರಿಗೆ ಹ
ವಿಧವಾದ ಅಪರಾಧವನ್ನು ಮಾಡಿರಬಹುದು. ಅದೆಲ್ಲವನ್ನೂ ಅವರೆಣಿ
ವವರಲ್ಲ. ಆದುದರಿಂದ ನೀನು ಅವರನ್ನೊಡಗೂಡಿ ಸುಖವಾಗಿ ಬ
ಬಹುದು. ನಿನ್ನಂತಹ ಅರಸರೆ ಪೃಥ್ವಿಯಲ್ಲಿಲ್ಲವೆಂದೆನ್ನಿಸಿಕೊಳ್ಳಬಹು
ಭೀಷ್ಮಾಚಾರ್ಯರೆ ಮೊದಲಾದವರು ಕೂಡ ಹೀಗೆಯೆ ಅಭಿಪ್ರಾ
ಪಡದಿರಲಾರರು. ಬೇಕಾದರೆ ನೀನೆ ಅವರನ್ನು ಕೇಳಿಕೊ.

ಭೀಷ್ಮ—ಕೃಷ್ಣನು ಹೇಳುವ ಮಾತು ಸಹಜವೆ ಸರಿ. ಸುಯೋ
ಧನ! ವ್ಯರ್ಥವಾಗಿ ಗರ್ವಪಟ್ಟು ಕೆಟ್ಟು ಹೋಗಬೇಡ. ಕೃಷ್ಣನು ಮಾ
ಕಾರಣಿಕ ಪುರುಷನೆಂಬುದನ್ನು ಮರೆತೆಯಾ?

ದ್ರೋಣ—ಸುಯೋಧನ, ಆಚಾರ್ಯರೆಂದಂತೆಯೆ ಮಾಡು.
ನ್ನನ ಮಹತ್ವಿಕೆಯನ್ನು ಅರಿಯೆಯ? ಆತನ ಗುರುದಕ್ಷಿಣೆಯನ್ನಾದರೂ
ಸಿಸಿಕೊ. ಅಂತಹ ಸಾಹಸವು ನಮ್ಮೊಳಗಾರಲ್ಲಿರುವುದು?

ಕೃಷ್ಣ—ಕೌರವ, ಇವರಿಗಂತೂ ಉಭಯ ಪಕ್ಷದವರೂ ಸಮಾ
. ಪಕ್ಷಪಾತವಿಲ್ಲದೆ ಹೇಳುತ್ತಾರೆ. ಅವರ ಮಾತನ್ನು ಉಲ್ಲಂಘಿಸ
ಡ.

ಸುಯೋ—ಕೃಷ್ಣ! ಪಾಂಡವರು ನಿನ್ನನ್ನು ರಾಜಕಾರ್ಯ ನಿರ್ವ
ಕಳುಹಿದುದು ಕೇವಲ ಮರುಳುತನವೇ ಸರಿ! ಸರಸವಾಡುವುದಕ್ಕಾಗಿ
ಚೆನ್ನಾಗಿತ್ತು. ಅವರಿಗೆಲ್ಲರ ಸಹಾಯವೂ ಇದೆ; ನಮಗೆ ಮಾತ್ರ
! ಸುಮ್ಮನೆ ಸಂಧಿಯ ಮಾತನ್ನೆತ್ತಿ ಪರಿಹಾಸ ಮಾಡಬೇಡ.

ಕೃಷ್ಣ—ಬೇಡ, ನಿನಗೆ ಸಾರಿ ಹೇಳುತ್ತೇನೆ. ಪಾಂಡವರನ್ನು
ರಿರುವುದೆ ಉಚಿತ. ಖೂಳರ ಬಲೆಗೆ ಸಿಲುಕಬೇಡ. ನಿಮ್ಮ ಕುಲವು
ಬ ವಿಖ್ಯಾತವಾದುದು! ಅದಕ್ಕೆ ಕಳಂಕವನ್ನು ತಂದು ಹಾಕಬೇಡ.
ಂಡವರು ನಿನ್ನಲ್ಲಿ ಪ್ರೇಮದಿಂದಲೆ ವರ್ತಿಸುವರು; ಅದಕ್ಕೇನೂ ಸಂದೇಹ
. ಇಂದ್ರಪ್ರಸ್ಥವನ್ನು ಅವರಿಗೆ ಕೊಟ್ಟು ಪಾಂಡವಪ್ರತಿಷ್ಠಾಚಾರ್ಯ
ಬ ಬಿರುದನ್ನು ಧರಿಸಿಕೊ. ಆಗ ನಿನ್ನಂತಹ ಅರಸರೆ ಇಲ್ಲವೆಂದಾ
ತ್ತದೆ.

ಸುಯೋ—ನಿಮ್ಮ ಪಾಂಡವರ ಪ್ರೇಮವೆಲ್ಲ ನಿಮ್ಮಲ್ಲಿಯೆ ಇರಲಿ.
ಷ್ಟು ಪ್ರೇಮವಿರುತ್ತಿದ್ದರೆ ಅರ್ಧರಾಜ್ಯ ಕೇಳುತಿದ್ದರೆ? ಸಿಂಹದ ಹೊಟ್ಟೆ
ಲ್ಲಿ ನರಿ ಹುಟ್ಟಿದಂತಾಯಿತು! ಕ್ಷತ್ರಿಯರಾಗುತಿದ್ದರೆ ಹೇಡಿಗಳಂತೆ
ುದ್ಧಕ್ಕೆ ಹಿಂಜರಿಯುತ್ತಿರಲಿಲ್ಲ. ಸಾಮರ್ಥ್ಯವಿದ್ದರೆ ಸಂಗ್ರಾಮಕ್ಕೆ
ಲಿ! ಸಂಧಾನವಾಗುವ ಹಾಗಿಲ್ಲ. ಅದಲ್ಲದೆ ನಮ್ಮ ದುಶ್ಶಾಸನನು
ನಕ್ಕೆಷ್ಟು ಮಾತ್ರಕ್ಕೂ ಸಮ್ಮತಿಸಲೊಲ್ಲನು.

ದುಶ್ಶಾ—ಎಲ್ಲಿಯಾದರೂ ಅಂಧಕಾರವು ಸೂರ್ಯನನ್ನು ಸೇರುವು
ಂಟೆ? ಪಾಂಡವರಿಗೂ ನಮಗೂ ಹೇಗೆ ಸರಿಬಿದ್ದೀತು? ಸಂಗ್ರಾಮವೆ
!

ಕೃಷ್ಣ—ಚಂದ್ರವಂಶಕ್ಕೆ ಕಳಂಕ ಬರುವ ಸಂಭವ ಬಾರದ
ಇವರ ಗುಣದೋಷಗಳು ನಿನಗೆ ಸಂಬಂಧಿಸುತ್ತವೆ. ಪಾಂಡವ
ಸೇರಿರುವುದೆ ಯುಕ್ತ.

ಭೀಷ್ಮ—ಸುಯೋಧನ, ಕೃಷ್ಣನ ಮಾತನ್ನು ಉಲ್ಲಂಘಿಸ
ನಾವೆಲ್ಲರೂ ಸಮರ್ಥರೆ ಇರುದು. ಆದರೆ ದೈವಬಲ ತಪ್ಪಿದ
ನಮ್ಮ ಸಾಹಸವೆಲ್ಲ ನಿಷ್ಪ್ರಯೋಜನವೆ ಸರಿ. ಸೀತೆಯನ್ನು ಕದ್ದೊ
ರಾವಣನೇನು ಸಾಮಾನ್ಯನೆ? ಆತನ ಅವಸ್ಥೆಯನ್ನಾದರೂ ಕೊ
ಭಾವಿಸಿ ನೋಡು.

ದ್ರೋಣ—ಸುಯೋಧನ, ಪಾಂಡವರು ಸಾಮಾನ್ಯ ಬಲರೆಂದೆ
ಬೇಡ! ಚಿತ್ರಸೇನನ ಸಂಗತಿಯನ್ನು ಜ್ಞಾಪಿಸಿಕೊ. ಮೊನ್ನೆ ಗೋ
ಹಣದಲ್ಲಿ ನೋಡಲಿಲ್ಲವೆ? ನಿನ್ನ ಸಂಧಾನಕ್ಕೆ ಬಂದ ಈ ಕೃ
ಸಾಮರ್ಥ್ಯವನ್ನು ನೀನೆ ಬಲ್ಲೆ. ವ್ಯರ್ಥವಾಗಿ ಕೆಟ್ಟುಹೋಗಬೇ
ಸಂಧಾನಕ್ಕನುವಾಗು.

ಸುಯೋ—ದೈವಬಲವೂ ಬಾಹುಬಲವೂ ಅವರಲ್ಲಿಯೆ ಇರ
ಅವರನ್ನು ನಾಶಮಾಡಬೇಕೆಂದು ನಾನೆಷ್ಟೊ ಸಲ ಯತ್ನಿಸಿದೆನು. ಆದ
ಸಾಧ್ಯವಾಗಲಿಲ್ಲ. ಕೊನೆಗೆ ದ್ಯೂತದ ನೆವದಿಂದ ಹೇಗಾದರೂ ಅವ
ಗಟ್ಟಿದೆನು. ಈಗ ಪುನಃ ಅವರಿಗೆ ಅಡವಿಯೆ ಗತಿಯಲ್ಲದೆ ರಾಜ್ಯ
ಎಷ್ಟು ಮಾತ್ರಕ್ಕೂ ಸಿಕ್ಕುವ ಹಾಗಿಲ್ಲ.

ಕೃಷ್ಣ—ವನವಾಸದಿಂದ ಅವರಿಗೇನೂ ಕುಂದುಂಟಾಗಲಿಲ್ಲ, ಬ
ಯಾ? ಸತ್ಯಚ್ಯುತರಾದರೆ ಅಪಕೀರ್ತಿ ಬರುವುದೆಂಬ ಭೀತಿಯಿಂದ ಕಾಡಿ
ಹೋದರು. ಈಗ ನೀನು ರಾಜ್ಯ ಕೊಡುವುದಿಲ್ಲವೆಂದರೆ ಭೀಮನ
ಎಷ್ಟು ಮಾತ್ರಕ್ಕೂ ಬಿಡುವ ಹಾಗೆ ಕಾಣುವುದಿಲ್ಲ. ಅದು ಹಾಗಿರಲಿ
ಅರ್ಧ ರಾಜ್ಯ ಬೇಡ! ಐವರಿಗೆ ಐದು ಗ್ರಾಮಗಳನ್ನಾದರೂ ಕೊಡ
ಇಂದ್ರಪ್ರಸ್ಥ, ಯಮಪ್ರಸ್ಥ, ಅವಂತಿ, ವಾರಣಾವತಿ, ಹಸ್ತಿನಾವತಿ—ಇವ
ಗಳನ್ನು ಕೊಟ್ಟರೆ ಸಾಕು. ಅವರನ್ನು ಹೇಗಾದರೂ ಸಂತುಷ್ಟರಾಗುವಂ
ಮಾಡುತ್ತೇನೆ.

ಸುಯೋ— ಇಂದ್ರಪ್ರಸ್ಥವು ದ್ರೋಣಾಚಾರ್ಯರಿಗಾಯಿತು. ಯಮು
ವು ಕೃಪಾಚಾರ್ಯರಿಗಾಯಿತು. ಅವಂತಿಯಲ್ಲಿ ಭೀಷ್ಮಾಚಾರ್ಯ
ರೆ. ವಾರಣಾವತಿಯನ್ನು ಕರ್ಣನಿಗೆ ಕೊಟ್ಟಿದ್ದೇನೆ. ಹಸ್ತಿನಾವತಿ
ಲ್ಲಿ ನಾನೇ ಇದ್ದೇನೆ. ಆದುದರಿಂದ ಅವರಿಗೇನೂ ಸಿಕ್ಕುವ ಸಂಭ
ಲ್ಲ!

ಕೃಷ್ಣ— ಹೋಗಲಿ! ನಿನಗಿಷ್ಟ ಬಂದ ಐದು ಊರುಗಳನ್ನು ಕೊಡು.
ವರನ್ನು ಸಮಾಧಾನಮಾಡುತ್ತೇನೆ.

ಸುಯೋ— ಹೇಗೆ ಕೊಡಲಿ? ಅಂದು ಬಲಿಯು ಮೂರೆ ಮೂರಡಿ
ಮಿಯನ್ನು ಕೊಟ್ಟು ಆತನಿಗೆ ಪಾತಾಳವಾಸವು ಪ್ರಾಪ್ತವಾಯಿತು.
ನಾನು ಐದು ಗ್ರಾಮಗಳನ್ನು ಕೊಟ್ಟುಬಿಟ್ಟರೆ ನನ್ನ ಅವಸ್ಥೆಯು
ಾಗುವುದೋ ಹೇಳುವುದಕ್ಕೆ ಬಾರದು! ಕೃಷ್ಣ, ನಿನಗೊಂದು ನಮ
ರ! ಬಂದ ಹಾದಿ ಹಿಡಿದುಕೊಂಡು ಹೋಗಬಹುದು.

ವಿದು— ಸುಯೋಧನ, ಈ ಕೃಷ್ಣನು ಸಾಕ್ಷಾತ್ ಶ್ರೀಮನ್ನಾ
ಯಣನು. ಭೀಷ್ಮಾಚಾರ್ಯರು ಕುರುಕುಲದ ಹಿರಿಯರು. ದ್ರೋಣಾ
ರ್ಯರು ಗುರುಗಳು. ಇಂತಹ ಮಹಾನುಭಾವರುಗಳ ಮಾತನ್ನು
ಕ್ಷಿಸುವುದು ಕೇವಲ ಅನುಚಿತ! ಸಂಧಾನಕ್ಕನುವಾಗು.

ಕೃಷ್ಣ— ಆವುದಾದರೂ ಒಂದು ಗ್ರಾಮವನ್ನಾದರೂ ಕೊಡ
ರೆಯಾ?

ಸುಯೋ— ಇಲ್ಲ! ಒಂದು ಗ್ರಾಮವಲ್ಲ! ಸೂಜಿಯ ಮೊನೆ
ಯುವಷ್ಟು ಕೂಡ ಸ್ಥಳ ಸಿಕ್ಕಲಾರದು! ಅವರು ಸಂಗ್ರಾಮಕ್ಕನೆ ಬರಲಿ!

ಕೃಷ್ಣ— ಸುಯೋಧನ, ಕೊಂಚ ಯೋಚಿಸಿನೋಡು.

ಸುಯೋ— ನಿನಗೆ ಗೋಸೇವೆಯನ್ನು ಮಾಡುವುದಕ್ಕಿಲ್ಲವೆ? ಏತ
ಗೆ ನಮ್ಮ ಆಸ್ಥಾನಕ್ಕೆ ಬಂದೆ? ರಾಜನೀತಿ ಏತಕ್ಕೆ? ಮಾಗಧನಿಗೆ
ರಿಕೊಂಡು ಸಮುದ್ರದ ನಡುವೆ ಅಡಗಿಕೊಂಡೆ! ಈಗ ಮಾತ್ರ ನನಗೆ
ಜನೀತಿ ಹೇಳುವುದಕ್ಕೆ ಬಂದೆಯಲ್ಲವೆ? ಚೆನ್ನಾಯಿತು! ಚೆನ್ನಾ
ತು!

ವಿದು—(ಸ್ವಗತ) ಈತನಿಗೇನೊ ಅವಸಾನಕಾಲ ಪ್ರಾಪ್ತವಾ
ಭಾನುಮತಿಯ ಓಲೆಭಾಗ್ಯವು ಇಂದಿಗೆ ತೀರಿತು. ಇನ್ನು ಧೃತರಾ
ಅನಾಥನಾದನು. ಇದಕ್ಕೇನಾದರೂ ಉಪಾಯಮಾಡಬೇಕು.

(ದ್ರೋಣ ಭೀಷ್ಮರಿಗೆ ಸನ್ನೆಮಾಡುವನು. ಮೂವರೂ ಒಂದೆಡೆ ಸೇರು
ಅವರರಿಯದಂತೆ ದುಶ್ಶಾಸನನು ಹಿಂದುಗಡೆ ಹೊಂಚುಹಾಕುತ್ತಿರುವನು).

ವಿದು—ಆಚಾರ್ಯರೆ, ಏನು ಮಾಡೋಣ?

ಭೀಷ್ಮ—ಸುಯೋಧನನ ಮೇಲೆ ಬಲಪ್ರಕಾಶಮಾಡಬೇಕು.

ವಿದು—ಹೇಗೆ?

ದ್ರೋಣ—ಕಟ್ಟಿಹಾಕಿ ಗಾಂಧಾರಿಯ ಬಳಿಗೆ ಕರೆದುಕೊಂ
ಹೋಗೋಣವೆ?

ಭೀಷ್ಮ—ಹಾಗೆಯೆ ಸರಿ. ಧೃತರಾಷ್ಟ್ರನನ್ನು ಕೇಳೋಣ.

ದುಶ್ಶಾ—ಅಣ್ಣಯ್ಯ, ನಿನ್ನನ್ನು ಕಟ್ಟಿಹಾಕುವ ಯೋಚನೆ ಮಾ
ತಿದ್ದಾರೆ.

ಸುಯೋ—ಹಾಗೆಯೆ? ಎಲ್ಲಿ? ಹಗ್ಗ ತೆಗೆದುಕೊಂಡು ಬಾ!
ಕಳ್ಳ ಕೃಷ್ಣನನ್ನು ಕಟ್ಟಿಬಿಡೋಣ!' ಪಾಂಡವರ ಅಹಂಕಾರವೆಲ್ಲ ಸ
ವಾಗುತ್ತೆ!

ಭೀಷ್ಮ—ರಾಯಭಾರಿಗಳನ್ನು ಕಟ್ಟುವುದು ಆವ ರಾಜನೀತಿ?

ಶಕುನಿ—ಗೋವಳರಿಗೆ ನೀತಿಯ ಬೇರೆ!

ಕೃಷ್ಣ—ಭೀಷ್ಮಾಚಾರ್ಯರೇ, ಚಂದ್ರಕಿರಣಗಳಿಗೆ ಚಂದ್ರಕಾಂತ
ಕರಗೀತಲ್ಲದೆ, ಶೈಲವು ಕರಗೀತೆ! ನಿಮ್ಮ ಮೊಮ್ಮಗನು ನನ್ನನ್ನು ಕ
ಹಾಕುವ ಯೋಚನೆಯಲ್ಲಿದ್ದಾನಂತೆ! ದೂತರನ್ನು ಕಟ್ಟಿಸುವುದು ಆ
ರಾಜನೀತಿ? ಆದರೆ ನಮಗೇನೂ ಭಯವಿಲ್ಲ!

ಭೀಷ್ಮ—ಧೃತರಾಷ್ಟ್ರಾ, ನಿನ್ನ ಮಗನ ಬುದ್ಧಿ ನೋಡಿದೆಯ
ಶ್ರೀ ಪರಮಾತ್ಮನನ್ನೆ ಕಟ್ಟಿಸುತ್ತಾನಂತೆ!

ಧೃತ—ಎಲೈ ಮಗನೆ, ರಾಕ್ಷಸಾಂತಕನಾದ ಈ ಕೃಷ್ಣನನ್ನು
ಯು? ನಿನ್ನಲ್ಲಿ ಸಾಮರ್ಥ್ಯವಿರುವುದೆ? ನೀನು ಮಾಡತೊಡಗಿದ
ರ್ಯವನ್ನು ಕೊಂಚ ಯೋಚಿಸಿ ನೋಡು! ಈ ಕೃಷ್ಣನಾರು? ವಸು
ರು? ಯಾದವರು ನಮಗೆ ತುಂಬ ಬೇಕಾದವರಲ್ಲವೆ? ಸುಮ್ಮನೆ
ಕುಂದು ತರಬೇಡ!

ವಿದುರ—ಎಲೈ ರಾಜನೆ, ಏತಕ್ಕಾಗಿ ನಿಮ್ಮ ನಿಮ್ಮ ಸಂಬಂಧ
ಹೇಳಿಕೊಳ್ಳುತ್ತ ಮೂರ್ಖನಾದ ನಿನ್ನೀ ಮಗನನ್ನು ಪ್ರಾರ್ಥಿಸುವೆ?
ಬೊಗಳಿದರೆ ದೇವಲೋಕ ಹಾಳಾದೀತೆ? ನರಿಯ ಕೂಗಿಗೆ
ವು ಬೆದರಿದುದನ್ನು ಎಲ್ಲಿಯಾದರೂ ಕೇಳಿ ಬಲ್ಲೆಯ? ಒಳ್ಳೆಯು
ದ್ದರೂ ಗರುಡನಿಗೆ ಸಾಟಿಯಲ್ಲ! ನಿನ್ನ ಮಕ್ಕಳ ದುರುಳತನಕ್ಕೆ ಈ
ಷ್ಣನು ಅಂಜುವನೆಂದೆಣಿಸಬೇಡ. ಈತನು ಕೇವಲ ಮನುಷ್ಯನಾ
. ಭವನಾಗಿದ್ದುಕೊಂಡು ಅಭವನಾಗಿಯೂ, ಚರನಾಗಿದ್ದುಕೊಂಡು
ನಾಗಿಯೂ, ಸಗುಣನಾಗಿದ್ದರೂ ಅಗುಣನಾಗಿಯೂ, ಏಕನಾಗಿದ್ದು
ನಾಗಿಯೂ, ಕ್ಷರನಾಗಿದ್ದುಕೊಂಡು ಅಕ್ಷರನಾಗಿಯೂ ಆವಾತನು
ಸುವನೊ ಅಂತಹ ಪರಮಾತ್ಮನೆ ಈತನು! ಮಧುಕೈಟಭ, ಪೌಂಡ್ರಕ,
ಡಿಬಿಕ—ಮೊದಲಾದ ದೈತ್ಯರನ್ನು ಈತನೆ ಕೊಂದವನು. ಲೋಕ
ಜಲಮಯವಾಗಲು ವಟಪತ್ರಶಾಯಿಯಾಗಿದ್ದವನು ಆರೆಂದೆಣಿ
? ಗಿರಿಗಹ್ವರಗಳಲ್ಲಿ ವಾಸಮಾಡಿಕೊಂಡು ಪರ್ಣಾಶನದಿಂದ ಶರೀರ
ಣಮಾಡುತ್ತ, ಸರ್ವದಾ ಧ್ಯಾನದಲ್ಲಿಯೆ ನಿರತರಾಗಿರುವ ಆ
ಪುರುಷರಿಗೆ ಕೂಡ ಈ ಮಹಾತ್ಮನ ಸಂದರ್ಶನವು ಕೇವಲ ದುರ್ಲಭ!
ಮಹಾತ್ಮನನ್ನು ಕುಲಘಾತುಕರಾದ ನಿನ್ನೀ ಮಕ್ಕಳಿಂದ ಕಟ್ಟ
ಸಾಧ್ಯವೆ?

ಧೃತ—ಆಹಾ! ಈ ಕೃಷ್ಣನ ಅಪಾರವಾದ ಮಹಿಮೆಯನ್ನು
ದುಷ್ಪುತ್ರರು ಈಗ ತಾನೆ ಕೇಳಿದರಲ್ಲವೆ? ಅಂತಹ ಮಹಾತ್ಮನನ್ನು
ಸುವುದಕ್ಕೆ ಆರಂಭಿಸಿದ ಈ ನೀಚರಿಗೆ ಆವ ಗೌರವ ಪ್ರಾಪ್ತವಾಗು
ೇ? ಮಗನೆ, ಇನ್ನಾದರೂ ಸಂಧಾನವನ್ನನುಗೊಳಿಸಲಾರೆಯ?

ಸುಯೋ—ಪಿತನೆ, ಭಯಪಡಬೇಡ. ಪರಮಾತ್ಮನು ಸರ್ವಂತ
ಮಿ. ಆತನೆ ನನ್ನ ಹೃದಯದೊಳಗೂ ಇದ್ದುಕೊಂಡು ಸಂಧಿ

ಮಾಡಕೂಡದೆಂದು ಹೇಳಿಸುತ್ತಾನೆ! ಇಲ್ಲದೆ ಹೋದರೆ ನಾನಾದ
ರಾದವರಿಗೆ ಅಳಿಸುವುದಕ್ಕೂ ಉಳಿಸುವುದಕ್ಕೂ ಎಲ್ಲಿನ ಸ್ವಾತಂತ್ರ
ವುದು? ಇನ್ನು ಆ ಭಯವನ್ನು ಬಿಟ್ಟುಬಿಡು. ನಾನು ಸತ್ತರೂ
ಕೈಯಿಂದಲೆ ಸಾಯುವೆನೆ ಹೊರತು ಎಂದಿಗೂ ಅಪಕೀರ್ತಿ ತಂದು
ಲಾರೆ! ಆದುದರಿಂದ ಸಂಧಾನವು ಎಂದಿಗೂ ಆಗಲಾರದು! ಆ ವಿಷ
ನಿಶ್ಚಿಂತನಾಗಿರು!

ಕೃಷ್ಣ—ರಾಜನೆ, ಏತಕ್ಕಾಗಿ ಕಿವುಡನಿಗೆ ಸಂಗೀತ ಹೇಳುವೆ

ಸುಯೋ—ದುಶ್ಶಾಸನ, ಏನು ನೋಡುತ್ತಿರುವೆ? ಆ ಗೊ
ಬಿಗಿದುಬಿಡು!

(ದುಶ್ಶಾಸನನು ಕರ್ಣನನ್ನು ಬಿಗಿಯುವುದಕ್ಕೆ ಹೋಗುವನು.)

ಕರ್ಣ—ದುಶ್ಶಾಸನ, ನನ್ನನ್ನೇಕೆ ಬಿಗಿವೆ?

ದುಶ್ಶಾ—ಕರ್ಣನೆ! ಏನಿದು? ಅಣ್ಣಯ್ಯ, ಎಲ್ಲರೂ ಕೃ
ಕಾಣಿಸುತ್ತಿರುವರಲ್ಲ! ಆರನ್ನು ಬಂಧಿಸಲಿ?


ವಿದುರ—ಪರಮಾತ್ಮನ ಮಹಿಮೆಯು ಅಪಾರವಾದುದೆ ಸರಿ!


ಸುಯೋ—ಆ ಖೂಳನು ತನ್ನ ಇಂದ್ರಜಾಲವನ್ನು ಪ್ರದರ್ಶಿಸ
ನಲ್ಲವೆ? ನೋಡೋಣ, ಕೊಂಚ ಸಾವಕಾಶವಾಡು!

ಕೃಷ್ಣ—ಇಂದ್ರಜಾಲವೆ? (ವಿಶ್ವರೂಪದರ್ಶನ)

— ಸಂಪೂರ್ಣ —

dog





and not [illegible] fell on the city
and discoryed.

II - tells the storys of the Vijayanager kings. Six hundred years ago it was the captail of Vijayanagar kingdom. Today it's a small city with ruined temples and palaces.

ಪುರಾವಶೀಗಾರಿ

...six hundred years...
it was the capital of Vijaya...
kingdom. Today it is a smal...
village with temples and pla...

Did you...

Did ... / ...